# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಫೆಬ್ರವರಿ 03, 2022

ಸಂಪುಟ : 48 ಸಂಚಿಕೆ : 264 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




## ಭೌತಿಕ ಬದುಕಿಗೆ ಅಧ್ಯಾತ್ಮಿಕ ಬೆಳಕು 'ಭಜನೆ'

### ರಾಜ್ಯಮಟ್ಟದ ಕನ್ನಡ ಸಮೂಹ ಭಜನಾ ಸ್ಪರ್ಧೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮೀಜಿ ಅಭಿಮತ

ದಾವಣಗೆರೆ, ಫೆ.2- ಮನುಕುಲದ ಭೌತಿಕ ಬದುಕಿಗೆ ಅಧ್ಯಾತ್ಮಿಕ ಬೆಳಕು ನೀಡುವ ಶಕ್ತಿ ಭಜನಾ ಕಾರ್ಯಕ್ರಮಗಳಿಗಿದೆ ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮೀಜಿ ಹೇಳಿದರು.

ನಗರದ ಹೊರ ವಲಯದಲ್ಲಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮದ ಆವರಣದಲ್ಲಿ ಇಂದಿನಿಂದ ಒಂದು ತಿಂಗಳ ಕಾಲ ನಡೆಯಲಿರುವ 'ರಾಜ್ಯಮಟ್ಟದ ಕನ್ನಡ ಸಮೂಹ ಭಜನಾ ಸ್ಪರ್ಧೆ' ಉದ್ಘಾಟನಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ರೇಡಿಯೋ, ಟಿವಿ ಮಾಧ್ಯಮಗಳು ಬರುವ ಮುನ್ನವೇ ಗ್ರಾಮೀಣ ಪ್ರದೇಶದಲ್ಲಿ ಭಜನಾ ಕಲಾವಿದರು ಭಜನೆಗಳನ್ನು ನಡೆಸುವ ಮೂಲಕ ಜನ ಸಾಮಾನ್ಯರ ನಿಜವಾದ ಬದುಕನ್ನು ಭಕ್ತಿ ಪ್ರಧಾನವನ್ನಾಗಿಸುತ್ತಿದ್ದರು. ಭಜನೆ ಮಾನವನ ಅಂತರಂಗ ಹಾಗೂ ಬಹಿರಂಗ ಬದುಕಿಗೆ ಸಾರ್ಥಕತೆ ತಂದು ಕೊಡುತ್ತವೆ ಎಂದರು.

**ಇಂದಿನಿಂದ 1 ತಿಂಗಳು ನಡೆಯುವ ಭಜನಾ ಸ್ಪರ್ಧೆ**

**40 ಮಹಿಳಾ ತಂಡಗಳೂ ಸೇರಿದಂತೆ 140 ತಂಡಗಳು ಸ್ಪರ್ಧೆಯಲ್ಲಿ ಭಾಗಿ**

ಭಜನಾ ಪದಗಳನ್ನು ಹೇಳುವ ಜೊತೆಗೆ ಅದರಲ್ಲಿನ ತತ್ವಗಳನ್ನು ಜೀವನದಲ್ಲಿ ಅಡಗಿಸಿಕೊಂಡರೆ ಬದುಕು ಸಾರ್ಥಕವಾಗುತ್ತದೆ. ಭಜನಾ ಸ್ಪರ್ಧೆ ಮನುಷ್ಯನನ್ನು ತಿದ್ದಿ ತೀಡಲು ಆಯೋಜಿಸಲಾಗಿರುವ ತಿಂಗಳ ಕಮ್ಮಟ ಎಂದು ವ್ಯಾಖ್ಯಾನಿಸಿದ ಶ್ರೀಗಳು, ಇಂತಹ ಅಮೂಲ್ಯ ಕಾರ್ಯಕ್ರಮದಿಂದ ವಂಚಿತರಾಗದೆ ಸದ್ಬಳಕೆ ಮಾಡಿಕೊಳ್ಳುವಂತೆ ಜನತೆಗೆ ಕರೆ ನೀಡಿದರು.

ಅಳಿವಿನಂಚಿನಲ್ಲಿರುವ ಭಜನಾ ಕಲಾವಿದರನ್ನು ಮತ್ತೆ ಜನರಿಗೆ ಪರಿಚಯಿಸಲು, ಭಜನೆಯ ಮಹತ್ವ ಸಾರಲು ಈ ಕಾರ್ಯಕ್ರಮ ಅತ್ಯಗತ್ಯವಾಗಿದೆ ಎಂದರು.

ಸ್ಪರ್ಧೆಯಲ್ಲಿ 40 ಮಹಿಳಾ ತಂಡಗಳು ಭಾಗವಹಿಸಿರುವುದಕ್ಕೆ ಶ್ಲಾಘಿಸಿದ ಶ್ರೀಗಳು, ಮಹಿಳೆ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಛಾಪು ಮೂಡಿಸಿದ್ದಾಳೆ. ಒಂದು ಕಾಲದಲ್ಲಿ ತಾಯಿ ಸಂಜೆಯ ವೇಳೆ ಮಕ್ಕಳಿಗೆ ತತ್ವ ಪದಗಳು, ಭಕ್ತಿಗೀತೆಗಳನ್ನು (3ನೇ ಪುಟಕ್ಕೆ)

## ಸಚಿವ ಸ್ಥಾನದ ಆಕಾಂಕ್ಷಿಗಳಿಗೆ ಮಣಿದ ಸಿಎಂ ಬೊಮ್ಮಾಯಿ

### ಫೆಬ್ರವರಿ 7 ರಂದು ದೆಹಲಿಯಲ್ಲಿ ವರಿಷ್ಠರ ಭೇಟಿ-ಚರ್ಚೆ

ಬೆಂಗಳೂರು, ಫೆ. 2 – ಸಚಿವ ಸ್ಥಾನದ ಆಕಾಂಕ್ಷಿಗಳಾಗಿರುವ ಶಾಸಕರ ಒತ್ತಡಕ್ಕೆ ಮಣಿದಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವರಿಷ್ಠರ ಭೇಟಿಗೆ ದೆಹಲಿ ಪ್ರವಾಸ ಕೈಗೊಳ್ಳುತ್ತಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ ಹಾಗೂ ರಕ್ಷಣಾ ಸಚಿವ ರಾಜನಾಥ್‌ಸಿಂಗ್ ಅವರನ್ನು ಭೇಟಿ ಮಾಡಿ, ಮಂತ್ರಿಮಂಡಲ ಪುನರ್‌ರಚನೆ ಸೇರಿದಂತೆ ಕೆಲವು ರಾಜಕೀಯ ವಿಚಾರಗಳ ಬಗ್ಗೆ ಚರ್ಚೆ ಮಾಡಲಿದ್ದಾರೆ. ಇದಕ್ಕಾಗಿ ಅವರ ಸಮಯಾವಕಾಶವನ್ನು ಕೋರಿದ್ದಾರೆ.

ನಾಳೆಯೇ ಮುಖ್ಯಮಂತ್ರಿಯವರು ದೆಹಲಿಗೆ ತೆರಳಬೇಕಿತ್ತು. ವರಿಷ್ಠರ ಸಮಯಾವಕಾಶ ದೊರೆಯದ ಕಾರಣ ಫೆಬ್ರವರಿ 7 ರಂದು ದೆಹಲಿಗೆ ತೆರಳುತ್ತಿದ್ದಾರೆ.

ಎರಡು ದಿನಗಳ ಕಾಲ ದೆಹಲಿಯಲ್ಲೇ ಉಳಿಯಲಿರುವ ಮುಖ್ಯಮಂತ್ರಿಯವರು ಪ್ರಧಾನಿ ಸೇರಿದಂತೆ ವರಿಷ್ಠ ನಾಯಕರನ್ನು ಭೇಟಿ ಮಾಡಿ, ಮಂತ್ರಿ ಮಂಡಲ ವಿಸ್ತರಣೆ ಇಲ್ಲವೇ ಪುನರ್‌ರಚನೆಗೆ ಅನುಮತಿ ಕೋರಲಿದ್ದಾರೆ.

ದೆಹಲಿ ಭೇಟಿ ಸಂದರ್ಭದಲ್ಲಿ ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ನಮ್ಮ ಸಂಸದರ ಸಭೆಯನ್ನು ಸೋಮವಾರ ಸಂಜೆ ಕರೆದಿದ್ದಾರೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಮ್ಮ ಪುತ್ರ ವಿಜಯೇಂದ್ರ ಅವರನ್ನು ಮಂತ್ರಿಮಂಡಲಕ್ಕೆ ಸೇರ್ಪಡೆ ಮಾಡಿಕೊಳ್ಳಬೇಕೆಂಬ ಒತ್ತಡವನ್ನು ಮುಖ್ಯಮಂತ್ರಿಯವರ ಮೇಲೆ ಹಾಗೂ ರಾಜ್ಯದ ಉಸ್ತುವಾರಿ ಹೊಣೆ ಹೊತ್ತಿರುವ ಅರುಣ್‌ಸಿಂಗ್ ಅವರ ಬಳಿ ಸತತವಾಗಿ ಒತ್ತಡ ತರುತ್ತಿದ್ದಾರೆ.

**ಪಕ್ಷದ ಹಿರಿಯ ಶಾಸಕರಾದ ಎಂ.ಪಿ. ರೇಣುಕಾಚಾರ್ಯ, ಬಸನಗೌಡ ಪಾಟೀಲ್ ಯತ್ನಾಳ್, ರಾಜೂಗೌಡ ಸೇರಿದಂತೆ ಹಲವು ಸದಸ್ಯರು ಮಂತ್ರಿಮಂಡಲ ಪುನರ್ ರಚನೆಗೆ ಒತ್ತಡ ತಂದಿದ್ದಾರೆ. ವರಿಷ್ಠರು ಹಸಿರು ನಿಶಾನೆ ತೋರಿದರೆ, ಮಂತ್ರಿಮಂಡಲ ವಿಸ್ತರಿಸಬಹುದು ಇಲ್ಲವೇ ಪುನರ್‌ರಚಿಸಬಹುದು.**

ಕೆಲವು ಶಾಸಕರು, ಸತತವಾಗಿ ಮಂತ್ರಿಯಾಗಿರುವವರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ಮಾಡಿಕೊಡಿ ಎಂಬ ಕೂಗೆಬ್ಬಿಸಿದ್ದಾರೆ. ದಿನನಿತ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ, ಖಾಲಿ ಉಳಿದಿರುವ ನಾಲ್ಕು ಸ್ಥಾನಗಳನ್ನು ಭರ್ತಿ ಮಾಡಿ, ತಮ್ಮನ್ನು ಮಂತ್ರಿ ಮಾಡಿ ಎಂದು ಒತ್ತಡ ಹೇರುತ್ತಿದ್ದಾರೆ.

ಶಾಸಕರ ಒತ್ತಡವಿದ್ದರೂ, ಸ್ವತಂತ್ರವಾಗಿ ಮುಖ್ಯಮಂತ್ರಿಯವರು ಯಾವ ನಿರ್ಣಯವನ್ನು ಕೈಗೊಳ್ಳಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ವರಿಷ್ಠರನ್ನು ಭೇಟಿ ಮಾಡಿ, ಶಾಸಕರ ಹಾಗೂ ಯಡಿಯೂರಪ್ಪನವರ ಅಭಿಪ್ರಾಯಗಳನ್ನು ಅವರ ಗಮನಕ್ಕೆ ತಂದು ಪುನರ್‌ರಚನೆಗೆ ಅನುಮತಿ ನೀಡುವಂತೆ ಕೋರಲಿದ್ದಾರೆ.

ವರಿಷ್ಠರ ಅನುಮತಿ ಇಲ್ಲದೆ ಯಾವುದೇ ರಾಜಕೀಯ ನಿರ್ಧಾರ ಸಾಧ್ಯವಿಲ್ಲ. ಉತ್ತರ ಪ್ರದೇಶ ಸೇರಿದಂತೆ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ದೆಹಲಿ ವರಿಷ್ಠರು ಮಗ್ನರಾಗಿದ್ದಾರೆ.

ಬೊಮ್ಮಾಯಿ ಅವರ ಕೋರಿಕೆಯನ್ನು ಈ ಸಂದರ್ಭದಲ್ಲಿ ಮಾನ್ಯ ಮಾಡಲಿದ್ದಾರೆಯೋ ಇಲ್ಲವೆ ಎಂದು ಕಾದು ನೋಡಬೇಕಾಗಿದೆ.

ಸಂಪುಟ ವಿಸ್ತರಣೆ ಇಲ್ಲವೇ ಪುನರ್‌ರಚನೆ ಮಾಡಲು ಮುಖ್ಯಮಂತ್ರಿಯವರಿಗೂ ಆಸಕ್ತಿ ಇಲ್ಲ. ಆದರೆ ಯಡಿಯೂರಪ್ಪನವರ ಒತ್ತಡಕ್ಕೆ ಒಂದು ನಿರ್ಧಾರ ಕೈಗೊಳ್ಳಲೇಬೇಕಾಗಿದೆ.

ವರಿಷ್ಠರು ತೆಗೆದುಕೊಳ್ಳುವ ನಿರ್ಧಾರದ ಮೇಲೆ ಮುಂದಿನ ಬೆಳವಣಿಗೆ ನಡೆಯಲಿದೆ. ದೆಹಲಿ ಭೇಟಿ (3ನೇ ಪುಟಕ್ಕೆ)

## ರಾಜ್ಯದ 88 ಬೃಹತ್ ಉದ್ಯಮಗಳಿಗೆ ಅಸ್ತು

ಬೆಂಗಳೂರು, ಫೆ.2 - ಹತ್ತು ಸಾವಿರ ಉದ್ಯೋಗ ಸೃಷ್ಟಿ ಮಾಡುವ 88 ಬೃಹತ್ ಕೈಗಾರಿಕೆಗಳಿಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಬೃಹತ್ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಇಂದು ನಡೆದ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ 2367 ಕೋಟಿ ರೂ. ಬಂಡವಾಳದಲ್ಲಿ ಈ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಮತಿ ನೀಡಲಾಗಿದೆ ಎಂದರು. ಒಟ್ಟು 88 ಯೋಜನೆಗಳಿಂದ 2367.99 (3ನೇ ಪುಟಕ್ಕೆ)

## ರೇಷ್ಮೆ ಗೂಡಿಗೆ ದಾಖಲೆ ಸಾವಿರ ರೂ. ಬೆಲೆ

ಬೆಂಗಳೂರು, ಫೆ.2 - ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿಗೆ ರೇಷ್ಮೆ ಗೂಡಿನ ದರ ಕೆಜಿಗೆ ಒಂದು ಸಾವಿರ ರೂ. ದಾಟಿದೆ.

ಪತ್ರಿಕಾ ಹೇಳಿಕೆಯಲ್ಲಿ ಈ ವಿಷಯ ತಿಳಿಸಿರುವ ರೇಷ್ಮೆ ಖಾತೆ ಸಚಿವ ನಾರಾಯಣಗೌಡ, ರಾಮನಗರ ರೇಷ್ಮೆ ಮಾರುಕಟ್ಟೆಯಲ್ಲಿ ಇಂದು ದಾಖಲೆ ಮಟ್ಟದಲ್ಲಿ ರೇಷ್ಮೆ ಗೂಡು ಹರಾಜಾಗಿದ್ದು, ಒಂದು ಕೆಜಿ ರೇಷ್ಮೆಗೂಡು ಬರೋಬ್ಬರಿ 1043 ರೂಪಾಯಿಗೆ ಮಾರಾಟವಾಗಿದೆ ಎಂದಿದ್ದಾರೆ. ರೇಷ್ಮೆ ಮಾರುಕಟ್ಟೆಗಳಲ್ಲಿ ರೇಷ್ಮೆ (3ನೇ ಪುಟಕ್ಕೆ)

## ಏಪ್ರಿಲ್‌ನಿಂದ ಕುಂದವಾಡ ಕೆರೆಯಲ್ಲಿ ನೀರು: ಮಲ್ಲಾಪುರ

ದಾವಣಗೆರೆ, ಫೆ. 2 - ಬರುವ ಮಾರ್ಚ್ ಅಂತ್ಯದೊಳಗೆ ಕುಂದವಾಡ ಕೆರೆಯ ಒಳ ಭಾಗದ ಕಾಮಗಾರಿ ಪೂರ್ಣಗೊಳಿಸಿ, ನೀರು ತುಂಬಿಸಿಕೊಳ್ಳಲು ಅವಕಾಶ ಕೊಡಲಾಗುವುದು ಎಂದು ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಕಳೆದ ವರ್ಷವೇ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. ಆದರೆ, ನ್ಯಾಯಾಲಯದಲ್ಲಿ ಪ್ರಕರಣ ದಾಖಲಾದ ಹಾಗೂ ಅತಿವೃಷ್ಟಿಯಿಂದಾಗಿ ವಿಳಂಬವಾಗಿದೆ ಎಂದು ಹೇಳಿದರು.

ಕಳೆದ ಒಂದು ತಿಂಗಳಿಂದ ಕೆಲಸ ಪುನರಾರಂಭವಾಗಿದೆ. 8-10 ದಿನಗಳಿಂದ ಕೆಲಸ ಚುರುಕು ಪಡೆದುಕೊಂಡಿದೆ. ಮಾರ್ಚ್ ಒಳಗೆ ಕೆಲಸ ಪೂರ್ಣಗೊಳಿಸಿ, ಏಪ್ರಿಲ್‌ನಿಂದ ನೀರು ತುಂಬಿಕೊಳ್ಳಲು ಅವಕಾಶ ಮಾಡಿಕೊಡಲಾಗುವುದು ಎಂದವರು ತಿಳಿಸಿದ್ದಾರೆ.

ಸ್ಮಾರ್ಟ್ ಸಿಟಿ ವತಿಯಿಂದ ನೀಡಲಾದ ಸ್ಮಾರ್ಟ್ ಕ್ಲಾಸ್ ಉಪಕರಣಗಳು ಭಗತ್ ಸಿಂಗ್ ನಗರದ ಸರ್ಕಾರಿ ಶಾಲೆಯಲ್ಲಿ ಬಳಕೆಯಾಗುತ್ತಿಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ತಕ್ಷಣವೇ ಕ್ರಮ ತೆಗೆದುಕೊಂಡು ಸಮಸ್ಯೆ ಇದ್ದರೆ ಬಗೆಹರಿಸಲಾಗುವುದು ಎಂದರು.

**ವಿದ್ಯಾರ್ಥಿಗಳಿಗೆ ಎರಡು ತಿಂಗಳು ಉಚಿತ ಆಪ್**

**ವಿದ್ವತ್ ಇನ್ನೋವೇಟಿವ್ ಸಂಸ್ಥೆಯ ವತಿಯಿಂದ 8, 9 ಹಾಗೂ 10ನೇ ತರಗತಿಯ ರಾಜ್ಯ ಮತ್ತು ಸಿಬಿಎಸ್‌ಇ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಆಪ್ ಅನ್ನು ಎರಡು ತಿಂಗಳ ಅವಧಿಗೆ ನೀಡುವುದಾಗಿ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ ತಿಳಿಸಿದ್ದಾರೆ. ಕಳೆದ ವರ್ಷ 6,900 ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಆಪ್ ನೀಡಲಾಗಿತ್ತು. ಈ ವರ್ಷ ಜಿಲ್ಲೆಯ ಸರ್ಕಾರಿ ಹಾಗೂ ಖಾಸಗಿ ಶಾಲೆಗಳೆರಡರ ವಿದ್ಯಾರ್ಥಿಗಳು ಈ ಸೌಲಭ್ಯ ಪಡೆಯಬಹುದು ಎಂದವರು ಹೇಳಿದ್ದಾರೆ.**

ಸ್ಮಾರ್ಟ್ ತರಗತಿಗಳಿಗಾಗಿ ಸ್ಮಾರ್ಟ್ ಸಿಟಿ ವತಿಯಿಂದ 15.34 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ. ತರಗತಿಗಳನ್ನು ನಡೆಸುವ ಬಗ್ಗೆ ಶಿಕ್ಷಕರಿಗೆ ತರಬೇತಿಯನ್ನೂ ನೀಡಲಾಗಿದೆ ಎಂದವರು ಹೇಳಿದ್ದಾರೆ. (2ನೇ ಪುಟಕ್ಕೆ)

## ನಿರುದ್ಯೋಗ ದರ ಶೇ.6.57ಕ್ಕೆ ಕುಸಿತ

ಮುಂಬೈ, ಫೆ. 2 – ದೇಶದ ನಿರುದ್ಯೋಗ ದರ ಜನವರಿಯಲ್ಲಿ ಶೇ.6.57ಕ್ಕೆ ಕುಸಿದಿದೆ. ಮಾರ್ಚ್ 2021ರ ನಂತರ ನಿರುದ್ಯೋಗ ಇದೇ ಮೊದಲ ಬಾರಿಗೆ ಇಷ್ಟು ಕಡಿಮೆ ಹಂತಕ್ಕೆ ಬಂದಿದೆ ಎಂದು ಸಿ.ಎಂ.ಐ.ಇ. ವರದಿ ತಿಳಿಸಿದೆ.

ನಗರ ಪ್ರದೇಶಗಳಲ್ಲಿ ನಿರುದ್ಯೋಗ ಪ್ರಮಾಣ ಶೇ.8.16 ಹಾಗೂ ಗ್ರಾಮೀಣ ಭಾಗದಲ್ಲಿ ಶೇ.5.84ರಷ್ಟಿದೆ ಎಂದು ಸೆಂಟರ್ (2ನೇ ಪುಟಕ್ಕೆ)

## ಕ್ರಿಪ್ಟೋ ತೆರಿಗೆಯಿಂದ ಕಾನೂನು ಮಾನ್ಯತೆ ಸಿಗದು : ಸಿ.ಬಿ.ಡಿ.ಟಿ.

ನವದೆಹಲಿ, ಫೆ. 2 – ಡಿಜಿಟಲ್ ಆಸ್ತಿ ಇಲ್ಲವೇ ಕ್ರಿಪ್ಟೋ ಕರೆನ್ಸಿಗಳ ಮೇಲೆ ತೆರಿಗೆ ಹಾಕುವುದರಿಂದ ಅವುಗಳು ಕಾನೂನು ಮಾನ್ಯತೆ ಪಡೆಯುವುದಿಲ್ಲ. ಆದರೆ, ಆದಾಯ ತೆರಿಗೆ ಇಲಾಖೆಗೆ ದೇಶದಲ್ಲಿ ನಡೆಯುತ್ತಿರುವ ವ್ಯವಹಾರದ ಆಳದ ಬಗ್ಗೆ ತಿಳಿಯುತ್ತದೆ ಎಂದು ಸಿ.ಬಿ.ಡಿ.ಟಿ. ಅಧ್ಯಕ್ಷ ಜೆ.ಬಿ. ಮೊಹಾಪಾತ್ರ ಹೇಳಿದ್ದಾರೆ. ಕ್ರಿಪ್ಟೋ ಕರೆನ್ಸಿ ವಲಯಕ್ಕೆ ತೆರಿಗೆದಾರರು (3ನೇ ಪುಟಕ್ಕೆ)

## 100 ಕೋಟಿ ವೆಚ್ಚದ 1,500 ಮನೆಗಳ ನಿರ್ಮಾಣಕ್ಕೆ ಶಾಸಕರಿಂದ ಶಿಲಾನ್ಯಾಸ



ರಾಣೇಬೆನ್ನೂರು

ರಾಣೇಬೆನ್ನೂರು, ಫೆ.2- ಪ್ರತಿ ರಾಜ್ಯಕ್ಕೂ ಒಂದು ಲಕ್ಷ ಕೋಟಿ ಹಣವನ್ನು ಬಡ್ಡಿರಹಿತ ಹಾಗೂ 50 ವರ್ಷದ ದೀರ್ಘಾವಧಿ ಸಾಲವನ್ನು ಕೊಡುವುದಾಗಿ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಹೇಳಿದೆ. ಆ ಹಣದಿಂದ ನಮ್ಮ ಸರ್ಕಾರ ಬಡವರ ಕಣ್ಣೀರು ಒರೆಸುವ ಕಾರ್ಯಕ್ರಮ ಹಾಕಿಕೊಳ್ಳಲಿದೆ ಎಂದು ಶಾಸಕ ಅರುಣಕುಮಾರ್ ಪೂಜಾರ ಹೇಳಿದರು.

ಇಲ್ಲಿನ ಅಡವಿ ಆಂಜನೇಯ ಬಡಾವಣೆಯಲ್ಲಿ ವಸತಿ, ಕೊಳಗೇರಿ ಅಭಿವೃದ್ಧಿ ಹಾಗೂ ನಗರಸಭೆ ಒಟ್ಟಾಗಿ ಕೈಗೊಂಡ ಕಾಮಗಾರಿಗಳ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಆರ್ಥಿಕ ಸಂಕಷ್ಟದಲ್ಲೂ ಸಹ ನಗರದ ಸೂರು ಇಲ್ಲದ ಬಡವರಿಗೆ ಸುಮಾರು ನೂರು ಕೋಟಿ (2ನೇ ಪುಟಕ್ಕೆ)

**ಮುಖ ನೋಡದ ಶಾಸಕದ್ವಯರು...**

ಶಾಸಕ ಅರುಣಕುಮಾರ್, ವಿಪ ಸದಸ್ಯ ಶಂಕರ್ ಅಕ್ಕಪಕ್ಕದಲ್ಲೇ ಕುಳಿತಿದ್ದರೂ ಸಮಾರಂಭ ಮುಗಿಯುವವರೆಗೂ ಸಹ ಒಬ್ಬರಿಗೊಬ್ಬರು ಮಾತನಾಡಲೇ ಇಲ್ಲ. ವಿರುದ್ಧ ದಿಕ್ಕಿನತ್ತಲೇ ಮುಖ ಮಾಡಿ ಕುಳಿತದ್ದು ಕಂಡುಬಂದಿತು. ತಮ್ಮ ಭಾಷಣಗಳಲ್ಲಿ ಪ್ರಾಸಂಗಿಕವಾಗಿ ಪರಸ್ಪರ ಹೆಸರುಗಳನ್ನು ಉಲ್ಲೇಖಿಸಿದ್ದು ಕೇಳಿಬಂದಿತು.

ಮೆರವಣಿಗೆಯಲ್ಲಿ ಕರೆತಂದ ಶಾಸಕರಿಗೆ ಜೆಸಿಬಿಯಲ್ಲಿ ನಿಂತು ಮಾಡಿದ ಪುಷ್ಪಾರ್ಚನೆ ಹಾಗೂ ಕ್ರೇನ್ ಮೂಲಕ ಬೃಹತ್ ಸೇಬು ಹಾರ ಹಾಕುವಾಗ ಅಧಿಕಾರಿಗಳ ಕರೆಯನ್ನು ಸ್ಥಳದಲ್ಲಿಯೇ ಇದ್ದ ಶಂಕರ್ ತಿರಸ್ಕರಿಸಿದ್ದು ಕಂಡು ಬಂದಿತು.

## ಗುಳೇ ತಪ್ಪಿಸಲು ಉದ್ಯೋಗ ಖಾತ್ರಿ ಅವಶ್ಯಕ

### ಮನರೇಗಾ ದಿವಸ್ ಆಚರಣೆ ಕಾರ್ಯಕ್ರಮದಲ್ಲಿ ಶಾಸಕ ಎಸ್.ವಿ. ರಾಮಚಂದ್ರ



ಜಗಳೂರು, ಫೆ.2- ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕ ಜಾರಿಗೊಳಿಸುವು ದರಿಂದ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಕೂಲಿಗಾಗಿ ಗುಳೇ ಹೋಗುವುದು ತಪ್ಪಲಿದೆ ಎಂದು ಶಾಸಕ ಎಸ್.ವಿ.ರಾಮಚಂದ್ರ ತಿಳಿಸಿದರು.

ತಾಲ್ಲೂಕಿನ ಅಸಗೋಡು ವಡ್ಡರಹಟ್ಟಿಯಲ್ಲಿ ಇಂದು ಕರ್ನಾಟಕ ಮಹಾತ್ಮ ಗಾಂಧಿ ನರೇಗಾ ನೌಕರರ ಕ್ಷೇಮಾಭಿವೃದ್ದಿ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಮನರೇಗಾ ದಿವಸ್ ಆಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ತಾಲ್ಲೂಕಿನ ಬಿಳಿಚೋಡು ಹೋಬಳಿ ವ್ಯಾಪ್ತಿಯ ವಡ್ಡರಹಟ್ಟಿಗಳಿಂದ ಉದ್ಯೋಗ ಅರಸಿ ಕಾಫಿ ನಾಡಿಗೆ ಗುಳೆ ಹೋಗುತ್ತಿದ್ದಾರೆ. ಇಂತಹ ಪ್ರದೇಶದಲ್ಲಿ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತಂದು ಗುಳೇ ತಪ್ಪಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ವಡ್ಡರ ಹಟ್ಟಿ ಗ್ರಾಮಕ್ಕೆ ಶೀಘ್ರ 15 ಮನೆಗಳನ್ನು ಮಂಜೂರು ಮಾಡಲಾಗುವುದು. ಅರ್ಹ ಫಲಾನುಭವಿಗಳಿಗೆ ತಲುಪಬೇಕು. ಹಣ ವಸೂಲಿ ಕೇಳಿಬಂದರೆ ಗ್ರಾ.ಪಂ ಸದಸ್ಯರುಗಳು ಹಾಗೂ ಅಧಿಕಾರಿಗಳ ವಿರುದ್ದ ಕ್ರಿಮಿನಲ್ ಕೇಸ್ ದಾಖಲಿಸಲಾಗುವುದು ಎಂದು ಖಡಕ್ ಎಚ್ಚರಿಕೆ ನೀಡಿದರು.

ಇನ್ನು 10 ದಿನಗಳಲ್ಲಿ ತಾಲ್ಲೂಕಿನ ಕೆರೆಗಳಿಗೆ ನೀರು ಭರ್ತಿಯಾಗಲಿದೆ. ಜಿಲ್ಲೆಯಲ್ಲಿ ಅಧಿಕಾರಿಗಳ ತಂಡ ಉತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ನಿಜವಾದ ಹೀರೋಗಳು ಅಧಿಕಾರಿಗಳು ಎಂಬ ಹೆಗ್ಗಳಿಕೆ ನನಗಿದೆ ಎಂದು ಶಾಸಕರು ಪ್ರಶಂಸಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ತಾಲ್ಲೂಕು ಬರದ ನಾಡಾಗಿದ್ದರೂ ಇಲ್ಲಿನ ಜನರು ಬಡತನ ಕಷ್ಟಗಳನ್ನು ಲೆಕ್ಕಿಸದೆ ಸಮರ್ಥವಾಗಿ ಎದುರಿಸುವ ಎದೆಗಾರಿಕೆ ಹೊಂದಿದ್ದಾರೆ. ಸಂಸದರು ಹಾಗೂ ಶಾಸಕರು ಅಧಿಕಾರಿಗಳ ಮೇಲೆ ಒತ್ತಡ ಹೇರದೆ ಸ್ವಾತಂತ್ರ್ಯ ನೀಡಿದ ಫಲವೇ ತಾಲ್ಲೂಕಿನ ಅಭಿವೃದ್ದಿಗೆ ಸಹಕಾರಿಯಾಗಿದೆ ಎಂದು ಅಭಿಪ್ರಾಯಿಸಿದರು.

ಗ್ರಾಮಕ್ಕೆ ಸರ್ಕಾರಿ ಬಸ್ ಸೌಕರ್ಯ ಸೇರಿದಂತೆ ಇತರೆ ಬೇಡಿಕೆಗಳಿಗೆ ಮನವಿ ಸಲ್ಲಿಸಿದ್ದು.ಕೂಡಲೇ ಸರ್ಕಾರಿ ಬಸ್ ವ್ಯವಸ್ಥೆ ಕಲ್ಪಿಸಲಾಗುವುದು.ಮನರೇಗಾದಡಿಯಲ್ಲಿ ಹಲವು ಬೇಡಿಕೆಗಳು ಈಡೇರುತ್ತವೆ. ಉಳಿದ ಬೇಡಿಕೆಗಳನ್ನು ಶಾಸಕರ (2ನೇ ಪುಟಕ್ಕೆ)

## ಮತ್ತೆರಡು ಕಾಲೇಜಲ್ಲಿ ಹಿಜಾಬ್ ವಿವಾದ

ಮಂಗಳೂರು, ಫೆ. 2 – ಉಡುಪಿಯ ನಂತರ ಕುಂದಾಪುರ ಹಾಗೂ ಭದ್ರಾವತಿ ಕಾಲೇಜುಗಳಲ್ಲಿ ಹಿಜಾಬ್ ವಿವಾದ ಭುಗಿಲೆದ್ದಿದೆ. ಕೆಲ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಬಂದಿದ್ದರೆ, ಅದಕ್ಕೆ ಪ್ರತಿಯಾಗಿ ಇನ್ನೂ ಕೆಲ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಬಂದಿದ್ದಾರೆ.

**ಹಿಜಾಬ್ ಧರಿಸಿ ಬಂದ ಕುಂದಾಪುರ-ಭದ್ರಾವತಿ ಕಾಲೇಜು ವಿದ್ಯಾರ್ಥಿಗಳು**

ಕುಂದಾಪುರದ ಸರ್ಕಾರಿ ಜ್ಯೂನಿಯರ್ ಕಾಲೇಜಿನಲ್ಲಿ ಮುಸ್ಲಿಮ್ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಕಾಲೇಜಿಗೆ ಬಂದಿರುವುದು ವಿವಾದಕ್ಕೆ ಕಾರಣವಾಗಿದೆ.

ಈ ನಡುವೆ, ನೂರಕ್ಕೂ ಹೆಚ್ಚು ಹಿಂದೂ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಕಾಲೇಜಿಗೆ ಬಂದಿದ್ದಾರೆ.

ಪರಿಸ್ಥಿತಿಯ ಗಂಭೀರತೆ ಅರಿತ ಕುಂದಾಪುರದ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ, ಕಾಲೇಜಿನ ಅಧಿಕಾರಿಗಳು ಹಾಗೂ ವಿದ್ಯಾರ್ಥಿಗಳ ಸಭೆ ನಡೆಸಿದ್ದಾರೆ. ಆದರೆ, ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಬರಲಿದ್ದಾರೆ ಎಂದು ಪೋಷಕರು (3ನೇ ಪುಟಕ್ಕೆ)

## ಗುಂಟೂರು ಜಿನ್ನಾ ಗೋಪುರಕ್ಕೆ ಪಾಲಿಕೆಯಿಂದ ರಾಷ್ಟ್ರಧ್ವಜದ ಬಣ್ಣ

ಅಮರಾವತಿ, ಫೆ. 2 – ಗುಂಟೂರಿನ ಮೊಹಮ್ಮದ್ ಅಲಿ ಜಿನ್ನಾ ಗೋಪುರ ವಿವಾದಕ್ಕೆ ತೆರೆ ಎಳೆಯಲು ಮುಂದಾಗಿರುವ ಸ್ಥಳೀಯ ನಗರ ಪಾಲಿಕೆ, ಗೋಪುರಕ್ಕೆ ರಾಷ್ಟ್ರಧ್ವಜದ ಬಣ್ಣಗಳನ್ನು ಬಳಿದಿದೆ.

ಕಳೆದ ಜನವರಿ 26ರಂದು ಜಿನ್ನಾ ಗೋಪುರದ ಮೇಲೆ ರಾಷ್ಟ್ರಧ್ವಜ ಹಾರಿಸಲು ಕೆಲವರು ಮುಂದಾಗಿದ್ದರು. ಅವರನ್ನು ಪೊಲೀಸರು ತಡೆದು ಬಂಧಿಸಿದ್ದರು.

ಗುರುವಾರದಂದು ಗೋಪುರದ ಮೇಲೆ ರಾಷ್ಟ್ರಧ್ವಜವನ್ನೂ ಹಾರಿಸಲಾಗುವುದು ಎಂದು ಗುಂಟೂರು ಮೇಯರ್ ಕವತಿ ಮನೋಹರ್ ನಾಯ್ಡು ಹಾಗೂ ಪರಿಷತ್ ಸದಸ್ಯ ಅಪ್ಪಿ ರೆಡ್ಡಿ ಹೇಳಿದ್ದಾರೆ. ಆದರೆ, ಬಿಜೆಪಿ ಬೇಡಿಕೆ (2ನೇ ಪುಟಕ್ಕೆ)

## ಜಿಲ್ಲೆಯಲ್ಲಿ 160 ಪಾಸಿಟಿವ್, 2 ಸಾವು

ದಾವಣಗೆರೆ, ಫೆ.2- ಜಿಲ್ಲೆಯಲ್ಲಿ 160 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ಇಬ್ಬರು ಸಾವನ್ನಪ್ಪಿದ್ದಾರೆ. 608 ಜನ ಗುಣಮುಖರಾಗಿದ್ದಾರೆ.

ದಾವಣಗೆರೆ ತಾಲ್ಲೂಕಿನಲ್ಲಿ 68, ಹರಿಹರ 15, ಜಗಳೂರು 16, ಚನ್ನಗಿರಿ 15, ಹೊನ್ನಾಳಿ 43 ಹಾಗೂ ಹೊರ ಜಿಲ್ಲೆಯ ಮೂವರಲ್ಲಿ (3ನೇ ಪುಟಕ್ಕೆ)




**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಲೇಔಟ್, ಬನಶಂಕರಿ ಬಡಾವಣೆ, ರಂಗನಾಥ ಬಡಾವಣೆ, ಜಯನಗರ, ಜೆ.ಹೆಚ್. ಪಟೇಲ್ ಬಡಾವಣೆ ಹಾಗೂ ದಾವಣಗೆರೆಯಾದ್ಯಂತ ಸೈಟುಗಳು ಮಾರಾಟಕ್ಕಿವೆ. ಕಮರ್ಷಿಯಲ್ ಮತ್ತು ಮನೆಗಳು, ಹೊಲ ಮಾರಾಟಕ್ಕಿವೆ.
97315 12365

**ಮನೆ ಪಾಠ ಮಾಡಲು ಶಿಕ್ಷಕರು ಬೇಕಾಗಿದ್ದಾರೆ**
6ನೇ ತರಗತಿ ಐ.ಸಿ.ಎಸ್.ಇ ಸಿಲ್ಲಬಸ್ ಮ್ಯಾತಮೆಟಿಕ್ಸ್ ಮತ್ತು ಸೈನ್ಸ್ ಸಬ್ಜೆಕ್ಟ್‌ಗೆ ಮನೆಗೇ ಬಂದು ಪಾಠ ಮಾಡಲು ನುರಿತ ಶಿಕ್ಷಕರು ಬೇಕಾಗಿದ್ದಾರೆ.
98447 69841

**ಡೂಪ್ಲೆಕ್ಸ್ ಮನೆಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಪೂರ್ವ 30x52 ಡೂಪ್ಲೆಕ್ಸ್, ಅಥಣಿ ಕಾಲೇಜು ಹತ್ತಿರ ಪೂರ್ವ 30x46 ಡೂಪ್ಲೆಕ್ಸ್, ಬಸವೇಶ್ವರ ಪೂರ್ವ 27x45 ಡೂಪ್ಲೆಕ್ಸ್, 30x40 ಪೂರ್ವ ಕೆಳಗೆ 2BHK ಮೇಲೆ ಡೂಪ್ಲೆಕ್ಸ್
ಐಗೂರು ವಿಜಯಕುಮಾರ್
99457 02495

**ಸೈಟ್‌ಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ, ಬನಶಂಕರಿ ಲೇಔಟ್‌ನಲ್ಲಿ 30x50, 30x50 West ಅಕ್ಕ-ಪಕ್ಕ, 30x40 West, 30x50 East, 30x63 Corner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸಂಘ-ಸಂಸ್ಥೆ, NGO, ಟ್ರಸ್ಟ್‌ಗಳ GST & INCOME TAX ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.**
94838 62779

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಪೂರ್ವ 30x40, 30x50, 30x54, 40x65, ಪಶ್ಚಿಮ 30x40, 30x50, ಬಸವೇಶ್ವರ ಮುಖ್ಯರಸ್ತೆ ಪಶ್ಚಿಮ 30x50, ಬಾಲಾಜಿ ಸರ್ಕಲ್ ಹತ್ತಿರ ಸೆಮಿ ಕಮರ್ಷಿಯಲ್ 45x52
ಐಗೂರು ವಿಜಯಕುಮಾರ್
99457 02495

**ಮಾರಾಟಕ್ಕಿವೆ**
ಉತ್ತಮ ತಳಿಯ ಅಡಿಕೆ ಸಸಿ ಮಾರಾಟಕ್ಕೆ ಲಭ್ಯವಿವೆ. ದಾವಣಗೆರೆಯಲ್ಲಿ (ದೊಡ್ಡ ಬಾತಿ) ಸಂಪರ್ಕಿಸಿ :
88920 08800

**ಮಳಿಗೆ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರೋಡ್ ದಾವಣಗೆರೆ.
ರೂಂ ಬಾಡಿಗೆಗೆ ಇದೆ
ಚಾಮರಾಜ ಪೇಟೆ, ದಾವಣಗೆರೆ.
ಫೋ. : 82177 72482

**ಸೈಟ್‌ಗಳು ಮಾರಾಟಕ್ಕಿದೆ**
ಬನಶಂಕರಿ ಲೇಔಟ್‌ನಲ್ಲಿ ಪಶ್ಚಿಮ, ಶಿವ ಪಾರ್ವತಿ ಲೇಔಟ್‌ನಲ್ಲಿ ಪಶ್ಚಿಮ, ಜೆ.ಹೆಚ್. ಪಟೇಲ್ ಬಡಾವಣೆ ಹತ್ತಿರ ಪಶ್ಚಿಮ, 30x50 KHB ಕಾಲೋನಿ ಉತ್ತರ
ಸಂಪರ್ಕಿಸಿ
97425 12125

**ಹುಡುಗರು ಬೇಕಾಗಿದ್ದಾರೆ**
ವಿದ್ಯಾನಗರ ಮೇನ್ ರೋಡ್‌ನಲ್ಲಿರುವ ಸಿದ್ದೇಶ್ವರ ಪ್ರಾವಿಜನ್ ಸ್ಟೋರ್‌ಗೆ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
93430 37565

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮತ್ಸ್ಯದ ಮನೆ**
ಮನೆಯಲ್ಲಿಯೇ ತಯಾರಿಸಿದ ಸಮುದ್ರದ ಮೀನಿನ ಆಹಾರಕ್ಕಾಗಿ ಸಂಪರ್ಕಿಸಿ
95133 14666
(ಹೋಂ ಡೆಲಿವರಿ ಮಾತ್ರ)

**ಮನೆ ಲೀಸ್/ಬಾಡಿಗೆಗೆ**
ಲೋಕಿಕೆರೆ ಕೈಗಾರಿಕಾ ವಲಯ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಹತ್ತಿರವಿರುವ 2 BHK ಲಿಫ್ಟ್ ಕಾರ್ ಪಾರ್ಕಿಂಗ್, ನೀರಿನ ವ್ಯವಸ್ಥೆ, ಸುಸಜ್ಜಿತ 1 ಮನೆ ಲೀಸ್/ಬಾಡಿಗೆಗೆ ಇದೆ ವಿಚಾರಿಸಿ.
99004 11110
99865 38099

**ಮನೆ ಮಾರಾಟಕ್ಕಿದೆ**
ಸಿದ್ಧವೀರಪ್ಪ ಬಡಾವಣೆ, 10ನೇ ಕ್ರಾಸ್. ನಂ. 1935/7, 44x60 ಅಳತೆಯಲ್ಲಿ 6 ಬೆಡ್ ರೂಂ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ.
99007 00091

**ಸೈಟುಗಳು ಮಾರಾಟಕ್ಕಿವೆ**
ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿ ಪೂರ್ವಾಭಿಮುಖದ 30x35 ಅಡಿವುಳ್ಳ ಸೈಟುಗಳು ಮಾರಾಟಕ್ಕಿವೆ.
ಸಂಪರ್ಕಿಸಿ : 94486 81376
98440 19575

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಅನುಭವವುಳ್ಳವರಿಗೆ ಆದ್ಯತೆ. ಸಂಪರ್ಕಿಸಿ:
ಪೂಜಾ ಹಾರ್ಡ್‌ವೇರ್ಸ್
ಅರುಣ ಟಾಕೀಸ್ ಎದುರು ಪಿ.ಬಿ. ರಸ್ತೆ, ದಾವಣಗೆರೆ.

**ಮನೆ/ಹೊಲ ಮಾರಾಟಕ್ಕಿದೆ**
ಹೌಸಿಂಗ್ ಬೋರ್ಡ್ ಕಾಲೋನಿ ಜಗಳೂರಿನಲ್ಲಿ 55x40 ಅಳತೆ ಇರುವ ಮನೆ ಸಹಿತ ಸೈಟ್ 2200 ಚದುರ ಅಡಿ ಮಾರಾಟಕ್ಕಿದೆ. ಚಿಕ್ಕ ಮಲ್ಲನಹೊಳೆ ಹತ್ತಿರ 6.5 ಎಕರೆ ಹೊಲ ಮಾರಾಟಕ್ಕಿದೆ. ಸಂಪರ್ಕಿಸಿ:
78925 82672, 82173 76314
96324 11756

**ಸೈಟ್ ಮಾರಾಟಕ್ಕಿದೆ**
ಎಂ.ಬಿ. ಸಿಟಿ ಪಕ್ಕ ಉದಯ್ ಶಿವಕುಮಾರ್ ಲೇಔಟ್‌ನಲ್ಲಿ 30x60 ಪಶ್ಚಿಮ ದಿಕ್ಕಿನ ಸೈಟ್ ಮಾರಾಟಕ್ಕಿದೆ.
(1400 PER SQFT)
ರಿಯಲ್ ಎಸ್ಟೇಟ್ ಏಜೆಂಟ್
86181 82332

**ಶ್ರೀ ಮುರುಘನ್ ಬೋರ್‌ವೆಲ್ಸ್**
ನಮ್ಮಲ್ಲಿ ಸೂಪರ್ ಫಾಸ್ಟ್ 4.5' ಇಂಚು ಬೋರ್‌ವೆಲ್ ಕೊರೆಯಲಾಗುವುದು. ಮನೆಯ ಒಳಗಡೆ ಮತ್ತು ಹೊರಗಡೆ 300-450 ಅಡಿಯವರೆಗೆ ಕೊರೆಯಲಾಗುವುದು.
99640 78484, 95906 15776

**ಹೆಬ್ಬೇವು ಮರಗಳು ಮಾರಾಟಕ್ಕಿವೆ**
ದಾವಣಗೆರೆ ತಾ. ಕ್ಯಾತನಹಳ್ಳಿ ಸಮೀಪ ಅಂದಾಜು 250 ಮರಗಳು ಮಾರಾಟಕ್ಕಿವೆ. ಸಂಪರ್ಕಿಸಿ :
99804 46808

**ಸೈಟ್‌ಗಳು ಮಾರಾಟಕ್ಕಿದೆ**
ಬಸವೇಶ್ವರ ಲೇಔಟ್ 50x60, ದಕ್ಷಿಣ, ಕುಂದುವಾಡ ರಸ್ತೆಗೆ ಹತ್ತಿರ, ಆಂಜನೇಯ ಬಡಾವಣೆ 60x40 ದಕ್ಷಿಣ, ರಶ್ಮಿ ಹತ್ತಿರ 40 ಅಡಿ ರಸ್ತೆಗೆ, ಕಮರ್ಷಿಯಲ್ ಸೈಟ್ 52x56.50, ದಕ್ಷಿಣ, 40x60 ರಿಂಗ್ ರಸ್ತೆ ಬಳಿ, ಡಿ.ಸಿ. ಆಫೀಸ್ ಹತ್ತಿರ (ಸೈಟ್‌ಗಳಿದ್ದಲ್ಲಿ ಖರೀದಿಸಲಾಗುವುದು (ಮಾಲೀಕರಿಂದ ಮಾತ್ರ)
97418 11694

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ದೋಸೆ ಭಟ್ಟರು ಬೇಕಾಗಿದ್ದಾರೆ**
ದಾವಣಗೆರೆ ಮತ್ತು ಬ್ಯಾಡಗಿಯಲ್ಲಿರುವ ಹೋಟೆಲ್‌ಗಳಿಗೆ ದೋಸೆ ಮಾಡುವ ಭಟ್ಟರು ಬೇಕಾಗಿದ್ದಾರೆ.
ಮೊ. : 93437 45992

**ಮನೆ ಬಾಡಿಗೆಗೆ**
1ನೇ ಫ್ಲೋರ್‌ನಲ್ಲಿ, 3 ಬೆಡ್ ರೂಂ ಹಾಗೂ 2 ಬೆಡ್ ರೂಂ, ಹೊಸ ಮನೆ, ವಿಳಾಸ : ಸಿದ್ದವೀರಪ್ಪ ಬಡಾವಣೆ, 8ನೇ ಕ್ರಾಸ್, ಡೋ. ನಂ. 1663/1-2, ಕಲ್ಪವೃಕ್ಷ, ದಾವಣಗೆರೆ.
ಸಂಪರ್ಕಿಸಿರಿ : 70198 78789
(Pets Not Allowed)

**ಬೋರ್‌ವೆಲ್ ಪಾಯಿಂಟ್**
ವೈಜ್ಞಾನಿಕ ವಿಧಾನದಿಂದ 1000 ಅಡಿವರೆಗೆ.
ಸಂಪರ್ಕಿಸಿ: ಬಸವರಾಜಪ್ಪ ಎಂ.ಟಿ.
ಜಲಸಂಶೋಧಕರು
94492 02888

**ಆಫೀಸ್ ಬಾಯ್ ಬೇಕಾಗಿದ್ದಾರೆ**
ಸಂಪರ್ಕಿಸುವ ಸಮಯ :
ಬೆ. 11.00 ರಿಂದ ಸಂ.: 5.30ರವರೆಗೆ
ಫೋ. : 08192 254736

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ**
ದಾವಣಗೆರೆ ವಕೀಲರ ಆಫೀಸಿನಲ್ಲಿ ಕಾರ್ಯನಿರ್ವಹಿಸಲು ಇಂಗ್ಲಿಷ್ ಹಾಗೂ ಕನ್ನಡ ಟೈಪ್ ರೈಟಿಂಗ್ ಬಲ್ಲಂತಹ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ಸಂಪರ್ಕಿಸಿ:
94497 40059

**WANTED**
**Sulthan Diamonds & Gold** is hiring experienced **Sales men** and **Sales girls** for its Davanagere and Shivamogga show-rooms with min 1yr experience in Jewellery. Send your CV to
hr@sulthangold.com

**ಬೇಕಾಗಿದ್ದಾರೆ**
Call Center - Girls
Accountant - Girls
Field Executive - Boys
Sri Kuruvatti Basaveshwara Pharma
College Road, P.J. Extn., Davangere.
95139 15520

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

## ವಿಜಯೇಂದ್ರರಾವ್ ಬೇದ್ರೆ ನಿಧನ



ದಾವಣಗೆರೆ ನಿಜಲಿಂಗಪ್ಪ ಬಡಾವಣೆ, 3ನೇ ಮೇನ್, ಮನೆ ನಂ.238ರ ವಾಸಿ,
**ಡಾ|| ಸುರೇಶ್ ವಿ.ಅಂಬರ್‌ಕರ್ ಹಾಗೂ ದಿನೇಶ್ ವಿ.ಅಂಬರ್‌ಕರ್ ಅವರ ಮಾವನವರು,**
**ಕೆ.ಇ.ಬಿ. ನಿವೃತ್ತ ಇಂಜಿನಿಯರ್ ಆಗಿದ್ದ**
**ಶ್ರೀ ವಿಜಯೇಂದ್ರರಾವ್ ಬೇದ್ರೆ** (83)
ಅವರು ದಿನಾಂಕ : 2.2.2022ರ ಬುಧವಾರ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು 6 ಜನ ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಶ್ರೀಯುತರ ಅಂತ್ಯಕ್ರಿಯೆಯು ದಿನಾಂಕ : 3.2.2022ರ ಗುರುವಾರ ಮಧ್ಯಾಹ್ನ 1-30ಕ್ಕೆ ನಗರದ ಪಿ.ಬಿ.ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನಡೆಯಲಿದೆ.

**ದುಃಖತಪ್ತ ಕುಟುಂಬ ವರ್ಗ:**
**ಮೊ: 78922 57110, 98443 63468, 9844404954**

# ದೇಶಾಭಿಮಾನ ಬೆಳೆಸಿಕೊಂಡು ಸತ್ಪ್ರಜೆಗಳಾಗಬೇಕು

## ಹರಪನಹಳ್ಳಿ : ನಿವೃತ್ತ ಯೋಧರೂ, ಶಿಕ್ಷಕರೂ ಆದ ಕರಿಬಸಪ್ಪ ಚಿಕ್ಕಬಾಸೂರು ಕರೆ



ಹರಪನಹಳ್ಳಿ, ಫೆ.2- ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಉತ್ತಮ ಕಲಿಕಾರ್ಥಿಗಳಾಗಿ ದೇಶ ಮುನ್ನಡೆಸುವ ಸಾಮರ್ಥ್ಯ, ಚಿಂತನೆ ಮೈಗೂಡಿಸಿಕೊಳ್ಳುವಂತೆ ನಿವೃತ್ತ ಯೋಧರೂ, ಶಿಕ್ಷಕರೂ ಆದ ಕರಿಬಸಪ್ಪ ಚಿಕ್ಕಬಾಸೂರು ಕರೆ ನೀಡಿದರು.

ತಾಲ್ಲೂಕಿನ ಕೆ. ಕಲ್ಲಹಳ್ಳಿಯ ಎ.ಬಿ. ಮಲ್ಲಪ್ಪ ಸರ್ಕಾರಿ ಪ್ರೌಢ ಶಾಲೆಯಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಹಾಲಿ ಮತ್ತು ನಿವೃತ್ತ ಯೋಧರ ಅಭಿನಂದನಾ ಸಮಾರಂಭದಲ್ಲಿ ಗೌರವ ಸ್ವೀಕರಿಸಿ ಮಾತನಾಡಿದರು.

ದೇಶಾಭಿಮಾನ ಮತ್ತು ರಾಷ್ಟ್ರಪ್ರೇಮ ಬೆಳೆಸಿಕೊಳ್ಳುವ ಮೂಲಕ ಸಮಾಜದಲ್ಲಿ ಸತ್ಪ್ರಜೆಗಳಾಗುವಂತೆ ಹಿತ ನುಡಿದರು.

ಮತ್ತೊಬ್ಬ ಯೋಧ, ವಿಕ್ರಮ್ ಸಾರಾಭಾಯಿ ಬಾಹ್ಯಾಕಾಶ ಸಂಸ್ಥೆಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಅಂಜಿನಪ್ಪ ಅಂಗೂರ ಮಾತನಾಡಿ, ದೇಶ ಸೇವೆ ಮಾಡುವ ಅದಮ್ಯ ಬಯಕೆ ಹೊಂದಿರುವ ವಿದ್ಯಾರ್ಥಿಗಳು ಸೇನಾ ನೇಮಕಾತಿಯಲ್ಲಿ ಆಯ್ಕೆ ಪ್ರಕ್ರಿಯೆಗಳು ಹೇಗಿರುತ್ತವೆ, ವಿದ್ಯಾರ್ಥಿಗಳು ಯಾವ ರೀತಿ ಭಾಗವಹಿಸಬೇಕು ಮತ್ತು ಸೇವಾ ನಿಯಮಗಳು ಹೇಗಿರುತ್ತವೆ ಎಂಬುವುದರ ಕುರಿತು ಸಮಗ್ರ ವಿಷಯಗಳನ್ನು ವಿದ್ಯಾರ್ಥಿಗಳ ಜೊತೆ ಹಂಚಿಕೊಂಡರು.

ಇನ್ನೋರ್ವ ಯೋಧ ಡಿ. ಮಂಜುನಾಥ್ ಮಾತನಾಡಿ, ದೇಶ ಸೇವೆಯೇ ಈಶ ಸೇವೆ ಎಂಬಂತೆ ಭಾರತೀಯರಾದ ನಾವುಗಳು ದೇಶಕ್ಕಾಗಿ ದುಡಿಯುವ ಅವಕಾಶ ಸಿಕ್ಕರೆ ಅದೇ ನಮ್ಮ ಪವಿತ್ರ ಕಾರ್ಯ ಎಂದು ತಿಳಿದು ಸೇವೆ ಸಲ್ಲಿಸಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕರವೇ ವಿಜಯನಗರ ಜಿಲ್ಲಾ ಸಂಚಾಲಕ ಟಿ. ನಂದೀಶ್ ಮಾತನಾಡಿದರು. ಶಿಕ್ಷಕ ಎಸ್. ವೀರೇಶ್ ನಿರೂಪಿಸಿದರು.

ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಕಸ್ತೂರಪ್ಪ, ಮುಖ್ಯ ಶಿಕ್ಷಕ ಕೆ. ಉಮಾಪತಿ, ಸಹ ಶಿಕ್ಷಕರಾದ ಬಿ. ಸತೀಶ್, ಕೆ. ಸಲಾಂಸಾಬ್, ಟಿ. ಹೊನ್ನಪ್ಪ, ಕೊಟ್ರೇಶ್, ವೀರಪ್ಪ, ಎಸ್. ಅಂಜಿನಪ್ಪ, ಕಲ್ಲಹಳ್ಳಿ ದೇವಸ್ಥಾನ ಕಮಿಟಿ ಅಧ್ಯಕ್ಷ ಹಾಲೇಶ್, ಪುಟ್ಟನಗೌಡ ಸೇರಿದಂತೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಏಪ್ರಿಲ್‌ನಿಂದ ಕುಂದವಾಡ ಕೆರೆಯಲ್ಲಿ ನೀರು



**(1ನೇ ಪುಟದಿಂದ)** ನಗರದಲ್ಲಿ ಸ್ಮಾರ್ಟ್ ಸಿಟಿ ವತಿಯಿಂದ ಒಟ್ಟು 95 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇದರಲ್ಲಿ 60 ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿವೆ. 33 ಕಾಮಗಾರಿಗಳು ಪ್ರಗತಿಯಲ್ಲಿದ್ದು, ಇನ್ನು ಎರಡು ತಿಂಗಳ ಅಂತ್ಯದೊಳಗೆ ಟೆಂಡರ್ ಪೂರ್ಣವಾಗಲಿದೆ ಎಂದು ಮಲ್ಲಾಪುರ ಮತ್ತೊಂದು ಪ್ರಶ್ನೆಗೆ ಉತ್ತರಿಸಿದರು. ಸ್ಮಾರ್ಟ್ ಸಿಟಿ ಮೊದಲ ಹಂತದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ಜೂನ್ 2023ರ ಗಡುವು ನೀಡಿದೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಈ ಸಂದರ್ಭದಲ್ಲಿ ಸ್ಮಾರ್ಟ್ ಸಿಟಿಯ ಮುಖ್ಯ ಅಭಿಯಂತರ ಎಂ.ಸತೀಶ್ ಹಾಗೂ ವಿದ್ವತ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರೋಹಿತ್ ಪಾಟೀಲ್ ಉಪಸ್ಥಿತರಿದ್ದರು.

### ಛಾಯಾಗ್ರಹಣ ಸ್ಪರ್ಧೆ

ಕೇಂದ್ರ ಸರ್ಕಾರದ ವತಿಯಿಂದ ರಾಷ್ಟ್ರೀಯ ಛಾಯಾಗ್ರಹಣ ಸ್ಪರ್ಧೆ ಆಯೋಜಿಸಲಾಗಿದೆ. ನಗರಗಳಲ್ಲಿ ಹವಾಮಾನದ ಪರಿಣಾಮಗಳು ಹಾಗೂ ಹವಾಮಾನ ಕುರಿತ ಕ್ರಮಗಳ ಬಗ್ಗೆ ಚಿತ್ರಗಳನ್ನು ಸ್ಪರ್ಧೆಗೆ ಕಳಿಸಬಹುದು ಎಂದು ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ ತಿಳಿಸಿದ್ದಾರೆ.

ಫೆ.15ರ ಒಳಗೆ ಚಿತ್ರಗಳನ್ನು ಸ್ಪರ್ಧೆಗೆ ಕಳಿಸಬೇಕಿದೆ. ಹೆಚ್ಚಿನ ವಿವರಗಳಿಗೆ https://niua.org/c-cube/content/national-photography-competition ವೆಬ್ ತಾಣ ಹಾಗೂ ದೂರವಾಣಿ : 08192 222383 ಸಂಪರ್ಕಿಸಬಹುದು.

## ಅಡವಿಹಳ್ಳಿ ಗ್ರಾಮ ಪಂಚಾಯ್ತಿ ಉಪಾಧ್ಯಕ್ಷರಾಗಿ ಮುಮ್ತಾಜ್ ಬೀ



ಹರಪನಹಳ್ಳಿ, ಫೆ. 2- ತಾಲ್ಲೂಕಿನ ಅಡವಿಹಳ್ಳಿ ಗ್ರಾಮ ಪಂಚಾಯ್ತಿ ಉಪಾಧ್ಯಕ್ಷರಾಗಿ ಮುಮ್ತಾಜ್ ಬೀ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ತಾ.ಪಂ. ಇಓ ಪ್ರಕಾಶ್ ಘೋಷಣೆ ಮಾಡಿದ್ದಾರೆ. ಹೊಂಬಳಗಟ್ಟಿ ಗ್ರಾಮದ ಮುಮ್ತಾಜ್ ಬೀ ಮಾತ್ರ ನಾಮಪತ್ರ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಹಿಂದೆ ಹೊಂಬಳಗಟ್ಟಿ ಗ್ರಾಮದ ವಜೀರಾಬಿ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಡೆದಿದೆ. ಈ ಸಂದರ್ಭದಲ್ಲಿ ಗ್ರಾ.ಪಂ. ಅಧ್ಯಕ್ಷ ಫಕ್ಕೀರಪ್ಪ, ಸದಸ್ಯರಾದ ಕೊಟ್ರೇಶ್, ರೇಣುಕಾ ಮಂಜುನಾಥ, ಪಿಡಿಓ ಎಂ.ಕೆ. ರಮೇಶ್, ಕಾರ್ಯದರ್ಶಿ ಜಗದೀಶ್, ವಿಜಯಕುಮಾರ್, ಶ್ರೀಮತಿ ಲಕ್ಷ್ಮೀಕಾಂತ, ಪೂಜಾರ ಪ್ರಸನ್ನ, ತಿಪ್ಪನಹಳ್ಳಿ ತಿಮ್ಮಣ್ಣ, ಆನಂದ ಸೇರಿದಂತೆ ಗ್ರಾ.ಪಂ. ಸದಸ್ಯರು ಉಪಸ್ಥಿತರಿದ್ದರು.

**ಸೈಟ್‌ಗಳು ಮಾರಾಟಕ್ಕಿವೆ**
ಎಸ್.ಎಸ್. ಲೇಔಟ್ 40x60, 40x60, ಎಂಸಿಸಿ 'ಬಿ' ಬ್ಲಾಕ್ ಪಶ್ಚಿಮ 40x60, ಬನಶಂಕರಿ 30x60, 40x60
ರಿಯಲ್ ಎಸ್ಟೇಟ್ ಏಜೆಂಟ್ ಪ್ರಶಾಂತ್
99726 70257

**WANTED**
**Sales Manager**
B.A./B.Com/Diploma
Tally, Basic Computer Knowledge
**Walk-in with Resume to**
**Agadi Track & Trail**
Murugharajendra Complex, Hadadi Road, Davangere.

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿ ಕೆಲಸಕ್ಕೆ ಹುಡುಗರು /ಹುಡುಗಿಯರು ಬೇಕಾಗಿದ್ದಾರೆ. ತತ್‌ಕ್ಷಣ ಸಂಪರ್ಕಿಸಿ
94803 43063

**ಡಿಪ್ಲೋಮಾ ಸರ್ಟಿಫಿಕೇಟ್ ಕಳೆದಿದೆ**
ನಾಮಧಾರಿ ಬಸವರಾಜ್ ಆದ ನಾನು ಬಾಪೂಜಿ ಪಾಲಿಟೆಕ್ನಿಕ್ ಶಾಬನೂರು ಕಾಲೇಜಿನಲ್ಲಿ ಡಿಪ್ಲೋಮಾ ಮುಗಿಸಿದ್ದು, ಅದರ ಮೂಲ ಪ್ರತಿಯನ್ನು ದಿನಾಂಕ : 14.01.2022 ರಂದು ದಾವಣಗೆರೆ ನಗರದ ಗಡಿಯಾರ ಕಂಬದ ಹತ್ತಿರದಲ್ಲಿ ಜೆರಾಕ್ಸ್ ಮಾಡಿಸಿಕೊಂಡು ಹೋಗುವಾಗ ಕಳೆದುಕೊಂಡಿರುತ್ತೇನೆ. ಆ ಮೂಲ ಪ್ರತಿ ಸಿಕ್ಕಿದ್ದಲ್ಲಿ ಈ ಕೆಳಕಂಡ ದೂರವಾಣಿಗೆ ಕರೆ ಮಾಡಿ.
ಡಿಪ್ಲೋಮಾ ನೊಂದಣಿ ಸಂಖ್ಯೆ : 335ME13021
ಸರ್ಟಿಫಿಕೇಟ್ SL No. : 042135
ಫೋ. : 87226 05632

**ಶ್ರೀ ದತ್ತಾತ್ರೇಯ ಜೋತಿಷ್ಯಾಲಯ**
ಪಂಡಿತ್ ಶ್ರೀ ರಾಮ್ ಭಟ್
ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಆರೋಗ್ಯ, ಸ್ತ್ರೀ - ಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿ ಮೋಸ ಇನ್ನಿತರೆ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರ. ಇಲ್ಲದಿದ್ದಲ್ಲಿ ಹಣ ವಾಪಸ್ ನೀಡಲಾಗುವುದು.
ಇಂದೇ ಕರೆ ಮಾಡಿ ; 98862 30791

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ಇಂದು 03.02.2022ರ ಗುರುವಾರದಂದು ಮಾತ್ರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಮರು ಮದುವೆ**
ಲಿಂಗಾಯತ ಮರು ಮದುವೆ ಬಯಸುವ ಸರ್ಕಾರಿ ನೌಕರಿಯಲ್ಲಿರುವ ಅಥವಾ ಖಾಸಗಿ ಕೆಲಸದಲ್ಲಿರುವ ಎಲ್ಲ ಬಗೆಯ ವಿಧವೆ, ವಿಧುರ, ವಿಚ್ಛೇದಿತರಿಗಾಗಿ ನೇರವಾಗಿ ಸಂಪರ್ಕಿಸಿರಿ
98807 29108

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804

**ಶಿರಸಿ ಶ್ರೀ ಮಾರಿಕಾಂಬ ದೇವಿ ಜ್ಯೋತಿಷ್ಯ ಕೇಂದ್ರ**
ನಿಮ್ಮ ಜೀವನದ ಸುಖ-ದುಃಖ, ಸರ್ವ ಸಮಸ್ಯೆಗಳಿಗೆ ಪರಿಹಾರ ಸಿಗದೇ ನೊಂದಿದ್ದರೆ, ನಿಮ್ಮ ಯಾವುದೇ ಇಷ್ಟಪಟ್ಟ ಕಾರ್ಯಗಳನ್ನು ಇಲ್ಲಿ ಅತೀ ಶೀಘ್ರದಲ್ಲಿ 100% ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಪಂ. ಶ್ರೀನಿವಾಸ ಭಟ್ಟರ್ ವಂಶ ಪಾರಂಪರಿಕ ಜ್ಯೋತಿಷ್ಯರು
ಮೊ. 97407-69784
ಮನೆ ವಿಳಾಸ : ಎಂ.ಸಿ.ಸಿ. 'ಎ' ಬ್ಲಾಕ್, ಶ್ರೀ ಸಾಯಿ ಬಾಬಾ ಮಂದಿರದ ಹತ್ತಿರ, ದಾವಣಗೆರೆ.

**JOBS**
Sales Manager/Executives
Any Degree (English, Computer Knowledge)
Office Job/Marketing/ Field Work, Male/Female
Freshers/Experienced
98444 92888

## 17ನೇ ವರ್ಷದ ಸವಿನೆನಪು



**ಹುಲಿಕಟ್ಟೆ ಕೆ.ಹೆಚ್. ರುದ್ರಪ್ಪನವರು**
**(ಲ್ಯಾಂಡ್ ಡೆವಲೆಪರ್)**
**ನೀವು ನಮ್ಮನ್ನಗಲಿ (02.02.2022ಕ್ಕೆ) ಹದಿನೇಳು ವರ್ಷಗಳು ಕಳೆದರೂ, ಸದಾ ನಿಮ್ಮ ಸವಿನೆನಪಿನಲ್ಲಿರುವ,**
ಪ್ರೀತಿಯ ತಾಯಿ-ತಂದೆ : **ದಿ.ಗಿರಿಜಮ್ಮ ಲೇ|| ಹುಲಿಕಟ್ಟೆ ಕೆ. ಹಾಲಪ್ಪ,** ಪತ್ನಿ : **ಗಂಗಮ್ಮ**
ಅಣ್ಣ-ತಮ್ಮಂದಿರು : **ಶ್ರೀಮತಿ ಗೌರಮ್ಮ, ಶ್ರೀ ಹುಲಿಕಟ್ಟೆ ಕೆ.ಹೆಚ್. ಚನ್ನಬಸಪ್ಪ**
**ಶ್ರೀಮತಿ ಭಾಗ್ಯಮ್ಮ, ಶ್ರೀ ಹುಲಿಕಟ್ಟೆ ಕೆ.ಹೆಚ್. ಮಲ್ಲಿಕಾರ್ಜುನ್**
**ಶ್ರೀಮತಿ ಶೈಲಜಾ, ಹುಲಿಕಟ್ಟೆ ಕೆ.ಹೆಚ್. ಹಾಲೇಶ್**
ಮಕ್ಕಳು : **ಶ್ರೀಮತಿ ಶೃತಿ, ಶ್ರೀ ಹುಲಿಕಟ್ಟೆ ರಾಜೇಶ್**
**ಶ್ರೀಮತಿ ಪೂಜಾ, ಶ್ರೀ ಹುಲಿಕಟ್ಟೆ ಕಾರ್ತಿಕ್,**
**ಶ್ರೀಮತಿ ಅನಿತಾ, ಶ್ರೀಮಂತ್, ಶಶಿಕುಮಾರ್, ಯದುಕುಮಾರ್, ಅಮಿತ್, ಚಂದನ್,** ಮೊಮ್ಮಕ್ಕಳು : **ರಿತಿಕಾ, ಗುಣವ್, ಪ್ರಹನ್, ಪಾಪು**
**ಹಾಗೂ ಹುಲಿಕಟ್ಟೆ ವಂಶಸ್ಥರು, ಬಂಧು-ಮಿತ್ರರು.**

# 1,500 ಮನೆಗಳ ನಿರ್ಮಾಣಕ್ಕೆ ಶಿಲಾನ್ಯಾಸ

**(1ನೇ ಪುಟದಿಂದ)** ವೆಚ್ಚದಲ್ಲಿ 15 ನೂರು ಮನೆಗಳನ್ನು ನಿರ್ಮಿಸಲು ವಸತಿ ಇಲಾಖೆ ಹಾಗೂ ಕೊಳಗೇರಿ ಅಭಿವೃದ್ಧಿ ಮಂಡಳಿ ನಿರ್ಣಯಿಸಿದ್ದು, ಆಂಜನೇಯ ಬಡಾವಣೆ ಸೇರಿದಂತೆ, ನಗರದ ವಿವಿಧ ಬಡಾವಣೆಗಳ ಕೊಳಚೆ ಪ್ರದೇಶದ ಬಡವರಿಗೆ ಮನೆಗಳನ್ನು ಕಟ್ಟಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿ ಎಲ್ಲೂ ಸೂರಿಲ್ಲದ ಬಡವರು ಇರದಂತೆ ಮಾಡುವ ಗುರಿ ನನ್ನದಾಗಿದೆ ಎಂದು ಶಾಸಕರು ಹೇಳಿದರು.

ನಮ್ಮದು ಬಡವರ ಮನೆಗೆ ಹೋಗಿ ಅವರ ಕಷ್ಟಗಳಲ್ಲಿ ಭಾಗಿಯಾಗುವ ಪಕ್ಷ, ನಾನು ಶಾಸಕನಲ್ಲ ನಿಮ್ಮ ಮನೆಯ ಮಗನಾಗಿ ಸೇವೆ ಮಾಡುತ್ತೇನೆ. ಕಾರಣ ಬಿಜೆಪಿಗೆ ನಿಮ್ಮ ಆಶೀರ್ವಾದ ಇರಲಿ ಎಂದು ಶಾಸಕರು ಹೇಳಿದರೆ, ಮೊದಲು ಮಾತನಾಡಿದ ನಗರಾಧ್ಯಕ್ಷೆ ರೂಪಾ ಚಿನ್ನಿಕಟ್ಟೆ, ಉಪಾಧ್ಯಕ್ಷೆ ಕಸ್ತೂರಿ ಚಿಕ್ಕಬಿದರಿ, ಪ್ರಾಧಿಕಾರದ ಅಧ್ಯಕ್ಷ ಚೋಳಪ್ಪ ಕಸವಾಳ, ಸದಸ್ಯರಾದ ಮಲ್ಲಪ್ಪ ಅಂಗಡಿ, ಕೊಳಗೇರಿ ಮಂಡಳಿ ಸದಸ್ಯರಾದ ಗೀತಾ ರವೀಂದ್ರ, ನಾಗರಾಜ್ ಬಿರಾದಾರ ಹಾಗೂ ಸ್ವಾಗತಿಸಿದ ಸಿದ್ದು ಚಿಕ್ಕಬಿದರಿ ಮಾತನಾಡಿ, ಶಾಸಕ ಅರುಣಕುಮಾರ್‌ಗೆ ಬಡವರ ಬಗ್ಗೆ ಅಪಾರ ಕಾಳಜಿ ಇದೆ. ಅವರಿಗೆ ಮತ್ತೊಮ್ಮೆ ಆಶೀರ್ವದಿಸಿ ನಿಮ್ಮ ಸೇವೆಗೆ ಅವಕಾಶ ಮಾಡಿಕೊಡಿ ಎಂದು ಬರಲಿರುವ ಚುನಾವಣೆ ಪ್ರಚಾರ ಮಾಡಿದರು.

ವಿಪ ಸದಸ್ಯ ಆರ್. ಶಂಕರ್, ಅರಣ್ಯ ಅಭಿವೃದ್ಧಿ ನಿಗಮದ ನಿರ್ದೇಶಕಿ ಭಾರತಿ ಜಂಬಗಿ, ಸ್ಥಾಯಿ ಸಮಿತಿ ಛೇರ್ಮನ್ ಸಿದ್ದಪ್ಪ ಬಾಗಲರ, ಬಿಜೆಪಿ ಮುಖಂಡ ಎಸ್. ಎಸ್.ರಾಮಲಿಂಗಣ್ಣನವರ, ಎಪಿಎಂಸಿ ಸದಸ್ಯ ಪರಮೇಶ್ ಗೂಳಣ್ಣರ, ಕೊಳಗೇರಿ ಅಧಿಕಾರಿ ಮೊಹಮ್ಮದ್ ಅಬ್ದುಲ್ ಖಯಾಂ, ನಗರಸಭೆ, ಆಶ್ರಯ ಸಮಿತಿ ಸದಸ್ಯರು, ಪೌರಾಯುಕ್ತ ಉದಯಕುಮಾರ್ ಮತ್ತಿತರರಿದ್ದರು.

## ಪಾಲಿಕೆಯಿಂದ ರಾಷ್ಟ್ರಧ್ವಜದ ಬಣ್ಣ

**(1ನೇ ಪುಟದಿಂದ)** ಯಂತೆ ಜಿನ್ನಾ ಗೋಪುರದ ಹೆಸರು ಬದಲಿಸುವುದಿಲ್ಲ ಎಂದವರು ಸ್ಪಷ್ಟಪಡಿಸಿದ್ದಾರೆ. ಈ ಗೋಪುರ ಸ್ವಾತಂತ್ರ್ಯ ಪೂರ್ವದ ದಿನದಂದಲೂ ನಗರದಲ್ಲಿ ಹಿಂದೂ - ಮುಸ್ಲಿಮರ ಐಕ್ಯತೆಯ ಸಂಕೇತವಾಗಿದೆ ಎಂದವರು ತಿಳಿಸಿದ್ದಾರೆ.

## ನಿರುದ್ಯೋಗ ದರ ಕುಸಿತ

**(1ನೇ ಪುಟದಿಂದ)** ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿ.ಎಂ.ಐ.ಇ.) ವರದಿ ತಿಳಿಸಿದೆ. ಕಳೆದ ಡಿಸೆಂಬರ್‌ನಲ್ಲಿ ನಿರುದ್ಯೋಗ ಪ್ರಮಾಣ ಶೇ.7.91ರಷ್ಟಿತ್ತು. ನಗರ ಭಾಗಗಳಲ್ಲಿ ಶೇ.9.30 ಹಾಗೂ ಗ್ರಾಮೀಣ ಭಾಗ ದಲ್ಲಿ ಶೇ.7.28ರಷ್ಟು ನಿರುದ್ಯೋಗ ಇತ್ತು ಎಂದು ವರದಿಯಲ್ಲಿ ಹೇಳಲಾಗಿದೆ.

# ಉದ್ಯೋಗ ಖಾತ್ರಿ ಅವಶ್ಯಕ

**(1ನೇ ಪುಟದಿಂದ)** ಸಮ್ಮತಿಯಿಂದ ಈಡೇರಿಸಲಾಗುವುದು ಎಂದರು.

ಜಿಲ್ಲಾ ಪಂಚಾಯ್ತಿ ಸಿಸಿಓ ಡಾ.ವಿಜಯ ಮಹಾಂತೇಶ್ ದಾನಮ್ಮನವರ್ ಮಾತನಾಡಿ, ಮನರೇಗಾ ಯೋಜನೆ 2006 ರಲ್ಲಿ ಪ್ರಾಯೋಗಿಕವಾಗಿ ಜಾರಿಯಾದ ಜಿಲ್ಲೆಗಳ ಪೈಕಿ ದಾವಣಗೆರೆ ಒಂದಾಗಿತ್ತು. 15 ವರ್ಷಗಳಿಂದ ದೇಶವ್ಯಾಪಿ ಪಸರಿಸಿ, ಲಿಂಗ, ಜಾತಿ ಭೇದವಿಲ್ಲದೆ ಸಮಾನ ಕೂಲಿ ಒದಗಿಸುತ್ತಿದೆ ಎಂದರು.

ಯೋಜನೆಯಲ್ಲಿ ಭೌತಿಕ ಆಸ್ತಿ, ಕೆರೆಗಳಲ್ಲಿ ಹೂಳೆತ್ತುವುದು ಹೊರತುಪಡಿಸಿದರೆ ಕೆರೆ ಸಮಗ್ರ ಅಭಿವೃದ್ಧಿ ಸಾಧ್ಯವಿಲ್ಲ. ಕಾಮಗಾರಿಗಳಲ್ಲಿ ಯಂತ್ರಗಳ ಬಳಕೆ ಮಾಡುವುದು ಸೇರಿದಂತೆ ಗುಣಮಟ್ಟ ಕಾಪಾಡುತ್ತಿಲ್ಲ ಎಂಬ ದೂರುಗಳಿದ್ದು, ಪಾರದರ್ಶಕತೆ ಕಾಪಾಡಿ ಮುಂದಿನ ದಿನಗಳಲ್ಲಿ ಪ್ರಮಾದಗಳನ್ನು ಸರಿಪಡಿಸಲಾಗುವುದು ಎಂದರು.

2022-23 ನೇ ಸಾಲಿನಲ್ಲಿ ವರ್ಷಕ್ಕೆ ಕನಿಷ್ಠ ಒಂದು ಕೆರೆ, ಸಮಗ್ರ ಅಭಿವೃದ್ಧಿ, ಶಾಲೆಗಳಲ್ಲಿ ಭೋಜನ ಕೊಠಡಿ ವ್ಯವಸ್ಥೆ, ಸರ್ಕಾರಿ ಜಮೀನಿನಲ್ಲಿ ಪವಿತ್ರ ವನ ನಿರ್ಮಾಣ, ಸ್ಮಶಾನ ಅಭಿವೃದ್ಧಿಗೆ ಯೋಜನೆ ತಯಾರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ 92 ಸಿಬ್ಬಂದಿಗಳು ಜಿ.ಪಂ., ತಾ.ಪಂ ಹಾಗೂ ಗ್ರಾ.ಪಂ ಹಂತದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಮನರೇಗಾ ಪ್ರತ್ಯೇಕ ಇಲಾಖೆಯಾದರೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಜಿ.ಪಂ ಉಪಕಾರ್ಯದರ್ಶಿ ಬಿ.ಆನಂದ್ , ತಹಶೀಲ್ದಾರ್ ಸಂತೋಷ್ ಕುಮಾರ್, ತಾ.ಪಂ ಇಓ ಲಕ್ಷ್ಮೀಪತಿ, ಬಿಇಓ ಉಮಾದೇವಿ, ಗ್ರಾ.ಪಂ ಅಧ್ಯಕ್ಷೆ ನಾಗಮ್ಮ, ಮನರೇಗಾ ನೌಕರರ ಕ್ಷೇಮಾಭಿವೃದ್ಧಿ ಸಂಘದ ಸಿದ್ದರಾಮಯ್ಯ ಹಾಗೂ ಪದಾಧಿಕಾರಿಗಳು, ಗ್ರಾಮಸ್ಥರು ಭಾಗವಹಿಸಿದ್ದರು.

## ಎಂ. ಷಣ್ಮುಖಾರಾಧ್ಯ ನಿಧನ



ದಾವಣಗೆರೆ ಹದಡಿ ರಸ್ತೆ ವಾಣಿ ರೈಸ್ ಮಿಲ್ ಹಿಂಭಾಗದ ತರಳಬಾಳು ಬಡಾವಣೆ 7ನೇ ಕ್ರಾಸ್ ವಾಸಿ, ನಿವೃತ್ತ ಉಪನ್ಯಾಸಕರಾದ
**ಶ್ರೀ ಎಂ. ಷಣ್ಮುಖಾರಾಧ್ಯ**
ಅವರು ದಿನಾಂಕ 2.2.2022ರ ಬುಧವಾರ ರಾತ್ರಿ 11.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 87 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 3.2.2022ರ ಗುರುವಾರ ಮಧ್ಯಾಹ್ನ 3.30ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.
**ದುಃಖತಪ್ತ ಕುಟುಂಬ ವರ್ಗ - ಮೊ. 99726-99943**

## ಮಿಟ್ಲಕಟ್ಟೆಯ ರವೀಂದ್ರ ನಿಧನ



ಹರಿಹರ ತಾಲ್ಲೂಕು ಮಿಟ್ಲಕಟ್ಟೆ ಗ್ರಾಮದ ಅಕ್ಕಿ ವ್ಯಾಪಾರಿ ಬಿ. ರವೀಂದ್ರ (46) ಅವರು ದಿನಾಂಕ 2.2.2022ರ ಬುಧವಾರ ಸಂಜೆ 4 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 3.2.2022ರ ಬುಧವಾರ ಬೆಳಿಗ್ಗೆ 9.30ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

# ನಗರ ಪಾಲಿಕೆ ಬಜೆಟ್ : ಮೂಲ ಸೌಕರ್ಯ ಕಲ್ಪಿಸಲು ಸಲಹೆ




ದಾವಣಗೆರೆ, ಜ.2- ನಗರ ಸ್ವಚ್ಛತೆ, ಧೂಳು ಮುಕ್ತ ನಗರ, ರಸ್ತೆ, ಒಳಚರಂಡಿ, ಫುಟ್‌ಪಾತ್ ನಿರ್ಮಾಣ, ಸಮರ್ಪಕ ಕಸ ವಿಲೇವಾರಿಗೆ ಆದ್ಯತೆ ಸೇರಿದಂತೆ ಅನೇಕ ಮೂಲಭೂತ ಸೌಕರ್ಯಗಳತ್ತ ಗಮನಹರಿಸಬೇಕೆಂಬ ಸಲಹೆಗಳು ಮಹಾನಗರ ಪಾಲಿಕೆ ಬಜೆಟ್ ಪೂರ್ವ ತಯಾರಿ ಸಭೆಯಲ್ಲಿ ಕೇಳಿಬಂದವು.

ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಮೇಯರ್ ಎಸ್.ಟಿ. ವೀರೇಶ್ ಅಧ್ಯಕ್ಷತೆಯಲ್ಲಿ ಬುಧವಾರ ಸಂಜೆ ಬಜೆಟ್ ಪೂರ್ವ ತಯಾರಿಯ 2 ನೇ ಸಭೆ ನಡೆಯಿತು.

ಲೋಕಿಕೆರೆ ರಸ್ತೆಯ 'ಕೈಗಾರಿಕಾ ವಸಾಹತು' ಸ್ಥಾಪನೆಯಾಗಿ 18 ವರ್ಷಗಳು ಕಳೆದರೂ ಸಹ ಇನ್ನೂ ಮೂಲಭೂತ ಸೌಲಭ್ಯಗಳು ಮರೀಚಿಕೆಯಾಗಿದ್ದು, ಇದುವರೆಗೂ ಪಾಲಿಕೆ ಇತ್ತ ಗಮನ ಹರಿಸದಿರುವುದು ವಿಷಾದದ ಸಂಗತಿ. ಕೈಗಾರಿಕಾ ವಸಾಹತುನಿಂದ ಪ್ರತಿ ತಿಂಗಳು 5 ಕೋಟಿ ರೂ. ಗಳನ್ನು ಜಿಎಸ್‌ಟಿ ಹಾಗೂ ಇತರೆ ತೆರಿಗೆ ಮೂಲಗಳಿಂದ ಪಾಲಿಕೆಗೆ ಆದಾಯ ಬರುತ್ತಿದೆ. ಒಳಚರಂಡಿ ಸೇರಿದಂತೆ ಯಾವುದೇ ಅಭಿವೃದ್ಧಿ ಕೆಲಸಗಳು ಆಗಿಲ್ಲವೆಂದು ಜಿಲ್ಲಾ ಸಣ್ಣ ಕೈಗಾರಿಕೆಗಳ ಉದ್ಯಮಿಗಳ ಸಂಘದ ಅಧ್ಯಕ್ಷ ಬಿ. ಶಂಭುಲಿಂಗಪ್ಪ ದೂರಿದರು.

ಕೈಗಾರಿಕಾ ವಸಾಹತು ನಿರ್ವಹಣೆಗಾಗಿ ಈ ಬಾರಿಯ ಬಜೆಟ್‌ನಲ್ಲಿ 10 ಲಕ್ಷ ರೂ. ಅನುದಾನವನ್ನು ಮೀಸಲಿರಿಸುವಂತೆ ಸಲಹೆ ನೀಡಿದರು. ನಗರದ ವಿವಿಧ ಭಾಗಗಳಲ್ಲಿರುವ ಸಮುದಾಯ ಭವನಗಳಿಗೆ ನೀಡಲಾಗುವ ಅನುದಾನವನ್ನು ಅನ್ಯ ಕಾಮಗಾರಿಗಳಿಗೆ ಬಳಕೆ ಮಾಡುವುದು ಬೇಡ. ಉದ್ದೇಶಿತ ಕಾಮಗಾರಿಗೆ ಮಾತ್ರ ಬಳಸುವಂತೆ ದಲಿತ ಮುಖಂಡ ಸೋಮಲಾಪುರ ಹನುಮಂತಪ್ಪ ಮನವಿ ಮಾಡಿದರು.

ರಸ್ತೆ ಬದಿ ಧೂಳು ಮತ್ತು ಕಸಗಳಿಂದ ನಗರದ ಜನತೆ ಅನಾರೋಗ್ಯಕ್ಕೆ ತುತ್ತಾಗುವ ಮೊದಲೇ ಧೂಳು ಮುಕ್ತ ನಗರವನ್ನಾಗಿ ಮಾಡುವಂತೆ ಮತ್ತು ಇಂಗು ಗುಂಡಿಗಳನ್ನು ನಿರ್ಮಿಸುವಂತೆ ಐಗೂರು ಪ್ರಭು ಸಲಹೆ ನೀಡಿದರು. ನಗರದ ರಿಂಗ್ ರಸ್ತೆ ಬಳಿ ಇರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ಎತ್ತರಿಸಲು ಪಾಲಿಕೆಯಿಂದ ಅನುದಾನ ಮೀಸಲಿಡಲು ಚಂದ್ರು ಮನವಿ ಮಾಡಿದರು.

ವಿಕಲಚೇತನರಿಗೆ ಸಮರ್ಪಕವಾಗಿ ಪಾಲಿಕೆಯಿಂದ ಸೌಲಭ್ಯಗಳು ದೊರೆಯುತ್ತಿಲ್ಲ. ಕೆಲವು ಇಲಾಖೆ ಸಿಬ್ಬಂದಿ ವಿಕಲಚೇತನರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ಎಂದು ವೀರೇಶ್, ಸುರೇಶ್, ನಾಗಮ್ಮ, ಬಿ. ಸುನೀಲ್, ಅಶ್ರಫ್ ಅಲಿ, ರಾಜಶೇಖರ್ ದೂರಿದರು.

ವಿಶೇಷವಾಗಿ ಶೌಚಾಲಯದ ವ್ಯವಸ್ಥೆ, ಸ್ವಯಂ ಉದ್ಯೋಗಕ್ಕಾಗಿ ಒತ್ತು ನೀಡಲು ಜೆರಾಕ್ಸ್ ಮಿಷನ್, ಕ್ಯಾಮೆರಾ, ಟೈಲ್ಸ್ ಮಿಷನ್, ಶ್ರವಣ ದೋಷ ಪರಿಕರಗಳನ್ನು ಮಾರಾಟ ಮಾಡಲು ಪಾಲಿಕೆ ವತಿಯಿಂದ ಸಹಾಯಧನ ನೀಡಬೇಕೆಂಬ ಅಹವಾಲುಗಳನ್ನು ಸಭೆ ಮುಂದಿಟ್ಟರು.

ಜೆಡಿಎಸ್ ಮುಖಂಡ ಜೆ. ಅಮಾನುಲ್ಲಾ ಖಾನ್ ಅವರು, ನಗರದ ನಾಲ್ಕು ದಿಕ್ಕುಗಳಲ್ಲಿ ತ್ಯಾಜ್ಯ ವಿಲೇವಾರಿ ಘಟಕಗಳನ್ನು ಸ್ಥಾಪಿಸಬೇಕು. ಬೀದಿ ದೀಪ ನಿರ್ವಹಣೆ, ನೀರು ಸರಬರಾಜು, ನಗರ ಸ್ವಚ್ಛತೆ ಪ್ರಮುಖ ಆದ್ಯತೆಯಾಗಬೇಕು. ಅಗತ್ಯತೆಗೆ ಅನುಗುಣವಾಗಿ ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವಂತೆ ಮನವಿ ಮಾಡಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೀರಪ್ಪ ಎಂ. ಬಾವಿ ಅವರು, ಹೆಚ್ಚುತ್ತಿರುವ ಜನಸಂಖ್ಯೆ, ವಾರ್ಡ್‌ಗಳನ್ನು ಗಮನದಲ್ಲಿಟ್ಟುಕೊಂಡು ದಾವಣಗೆರೆ ಬೃಹತ್ ಮಹಾನಗರ ಪಾಲಿಕೆಯಾಗುವ ನಿಟ್ಟಿನಲ್ಲಿ ಗಮನಹರಿಸಬೇಕು ಎಂದರು.

ನಗರದಲ್ಲಿರುವ ಬಡ ಪತ್ರಕರ್ತರಿಗೆ ಪಾಲಿಕೆ ಅನುದಾನದಲ್ಲಿ ಮೀಡಿಯಾ ಕಿಟ್ ವಿತರಿಸಬೇಕು, ಪತ್ರಕರ್ತರ ಭವನ ನಿರ್ಮಾಣಕ್ಕೆ ಮುಂದಾಗಬೇಕು. ಹಿಂದುಳಿದ ಪ್ರದೇಶಗಳಲ್ಲಿರುವ ಸರ್ಕಾರಿ ಶಾಲೆಗಳ ಮಕ್ಕಳಿಗೆ ಪಾಲಿಕೆಯಿಂದ ಉಚಿತವಾಗಿ ನೋಟ್ ಬುಕ್, ಬ್ಯಾಗ್ ವಿತರಿಸುವಂತೆ ಸಲಹೆ ನೀಡಿದರು.

ಲೆಕ್ಕಪರಿಶೋಧಕ ಜಂಬಿಗಿ ರಾಧೇಶ್ ಅವರು, ಕಟ್ಟಡ ಪರವಾನಿಗೆ ಶುಲ್ಕ ಹೆಚ್ಚಳ, ಖಾಲಿ ನಿವೇಶನದಲ್ಲಿ ಕಸ ಹಾಕುವವರಿಗೆ ದಂಡ ವಿಧಿಸುವುದು, ಸಾರ್ವಜನಿಕ ಮಾರುಕಟ್ಟೆ, ಪಾಲಿಕೆ ವ್ಯಾಪ್ತಿಯ ಮಳಿಗೆಗಳ ಬಾಡಿಗೆ ಹೆಚ್ಚಿಸುವುದು, ಪಾಲಿ ಕ್ಲಿನಿಕ್‌ಗಳಿಗೆ ತೆರಿಗೆ ವಿಧಿಸುವುದು ಸೇರಿದಂತೆ ಇತರೆ ತೆರಿಗೆ ವಿಧಿಸುವ ಮೂಲಕ ಪಾಲಿಕೆ ಆದಾಯ ಹೆಚ್ಚು ಮಾಡಿಕೊಳ್ಳಲು ಸಲಹೆ ನೀಡಿದರು.

ಪತ್ರಕರ್ತರಾದ ಸುರೇಶ್ ಕುಣಿಬೆಳಕೆರೆ, ರವಿ ಅವರು ಎಸ್ಸಿ, ಎಸ್ಟಿ ಪತ್ರಕರ್ತರಿಗೆ ಮೀಡಿಯಾ ಕಿಟ್ ವಿತರಿಸುವಂತೆ ಪಾಲಿಕೆಯ ಮೇಯರ್ ಗೆ ಮನವಿ ಮಾಡಿದರು.

ಸ್ಫೂರ್ತಿ ಸಂಸ್ಥೆ ರೂಪಾನಾಯ್ಕ, ಹಾಲೇಶ್, ಉದಯಕುಮಾರ್, ಮಲ್ಲಿಕಾರ್ಜುನ್ ಇಂಗಳೇಶ್ವರ ಮುಂತಾದವರು ಸಲಹೆಗಳನ್ನು ನೀಡಿದರು.

ಆಯುಕ್ತ ವಿಶ್ವನಾಥ ಪಿ.ಮುದಜ್ಜಿ, ಸ್ಥಾಯಿ ಸಮಿತಿ ಸದಸ್ಯರಾದ ಉಮಾ ಪ್ರಕಾಶ್, ರೇಣುಕಾ ಶ್ರೀನಿವಾಸ್, ಗೀತಾ ದಿಳ್ಳೆಪ್ಪ, ಎಲ್.ಡಿ. ಗೋಣೆಪ್ಪ ಮತ್ತಿತರರರು ಉಪಸ್ಥಿತರಿದ್ದರು.

## ಮಲೇಬೆನ್ನೂರಿನಲ್ಲಿ ಮಡಿವಾಳ ಮಾಚಿದೇವರ ಜಯಂತಿ



ಮಲೇಬೆನ್ನೂರು, ಫೆ. 2- ಇಲ್ಲಿನ ಪುರಸಭೆ ಮತ್ತು ನಾಡ ಕಚೇರಿಯಲ್ಲಿ ಮಡಿವಾಳ ಮಾಚಿದೇವರ ಜಯಂತಿಯನ್ನು ಆಚರಿಸಲಾಯಿತು.

ಉಪ ತಹಶೀಲ್ದಾರ್ ಆರ್. ರವಿ, ಪುರಸಭೆ ಮುಖ್ಯಾಧಿಕಾರಿ ಶ್ರೀಮತಿ ರುಕ್ಮಿಣಿ ಅವರು ಮಾಚಿ ದೇವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸಿದರು.

ಈ ವೇಳೆ ಪುರಸಭೆ ಸದಸ್ಯ ಸಾಬೀರ್ ಜಯಸಿಂಹ ಮಾತನಾಡಿ, ವಚನಗಳನ್ನು ಸಂಗ್ರಹ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮಡಿವಾಳ ಮಾಚಿದೇವರು ಅಸ್ಪೃಶ್ಯತೆ, ಅಸಮಾನತೆ ವಿರುದ್ಧ ಗಣಾಚಾರಿಯಾಗಿ ಹೋರಾಟ ಮಾಡಿದ್ದಾರೆಂದು ಸ್ಮರಿಸಿದರು.

ಪುರಸಭಾ ಸದಸ್ಯರಾದ ಕೆ.ಜಿ. ಲೋಕೇಶ್, ಗೌಡ್ರು ಮಂಜಣ್ಣ, ಬಿ. ಮಂಜುನಾಥ್, ಮಹಮದ್ ನಯಾಜ್, ದಾದಾಪೀರ್, ಮಾಜೀದ್, ಅನ್ವರ್ ಸಾಬ್ ನಾಮಿನಿ ಸದಸ್ಯರಾದ ಎ.ಕೆ. ಲೋಕೇಶ್, ಮಡಿವಾಳ ಸಮಾಜದ ಮುಖಂಡರಾದ ಎಂ.ಆರ್. ಮಹಾದೇವಪ್ಪ, ತಾಲ್ಲೂಕು ಕುರುಬ ಸಮಾಜದ ಕಾರ್ಯದರ್ಶಿ ಕೆ.ಪಿ. ಗಂಗಾಧರ್, ಗ್ರಾ.ಪಂ. ಮಾಜಿ ಅಧ್ಯಕ್ಷ ಭೋವಿ ಕುಮಾರ್, ಪುರಸಭೆ ಮಾಜಿ ಸದಸ್ಯ ಬಿ. ಸುರೇಶ್, ವಿಶೇಷ ಚೇತನ ಸಂಘದ ಅಧ್ಯಕ್ಷ ಪಿ. ಗಂಗಾಧರ್ ಮತ್ತಿತರರು ಭಾಗವಹಿಸಿದ್ದರು.

## ದೈಹಿಕ ಶಿಕ್ಷಕ ರವಿಕುಮಾರ್ ನಿವೃತ್ತಿ



ದಾವಣಗೆರೆ, ಫೆ.2- ನಗರದ ಮಾರುತಿ ಶಾಲೆಯ ದೈಹಿಕ ಶಿಕ್ಷಕ ರವಿಕುಮಾರ್ ಅವರು ನಿವೃತ್ತಿ ಹೊಂದಿದ್ದು, ನಗರದಲ್ಲಿ ಬಾಲ್ ಬ್ಯಾಟ್ಮಿಂಟನ್ ಆಟವನ್ನು ಬೆಳಸಿ, ರಾಜ್ಯ ಹಾಗೂ ಅಂತರಾಜ್ಯ ಮಟ್ಟದಲ್ಲಿ ಆಟ ಆಡುತ್ತಿರುವ ಕುಮಾರಸ್ವಾಮಿ, ಮಧುಸೂದನ್, ಹರೀಶ್ ರೆಡ್ಡಿ, ಶಶಿಕುಮಾರ್ ಇನ್ನಿತರೇ ಆಟಗಾರರನ್ನು ಬೆಳಿಸಿದ ಕೀರ್ತಿ ರವಿಕುಮಾರ್ ಸಲ್ಲುತ್ತದೆ.

ಈ ಸಂದರ್ಭದಲ್ಲಿ ರವಿಕುಮಾರ್ ಅವರಿಗೆ ಜಿಲ್ಲಾ ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಪದಾಧಿಕಾರಿಗಳು ಶಾಲು ಹೊದಿಸಿ, ಸನ್ಮಾನಿಸಿದರು.

## ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ದಾವಣಗೆರೆ,ಫೆ.2- ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ಹಾಗೂ ಪ್ರವರ್ಗ-1 ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸುವ ಅವಧಿಯನ್ನು ಇದೇ ದಿನಾಂಕ 28 ರವರೆಗೆ ವಿಸ್ತರಿಸಲಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

## ಸೈಕಲ್ ಜಾಥಾದ ಮೂಲಕ ಗಿನ್ನಿಸ್ ದಾಖಲೆ

ರೋಟರ್ಯಾಕ್ಟ್ ಸದಸ್ಯರಾದ ಧನುಷ್ ಹಾಗೂ ಹೇಮಂತ್ ಅವರುಗಳು ಸೈಕಲ್‌ನಲ್ಲಿ ಇಪ್ಪತ್ತೈದು ಸಾವಿರ ಕಿ.ಮೀ. ಪ್ರಯಾಣಿಸಿ ಗಿನ್ನಿಸ್ ದಾಖಲೆ ಬರೆಯುವ ತವಕದಲ್ಲಿದ್ದಾರೆ. ಇವರುಗಳು 26 ರಾಜ್ಯಗಳು ಹಾಗೂ 3 ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡಂತೆ ದೇಶದ ವಿವಿಧ ಸ್ಥಳಗಳಲ್ಲಿ ಪರಿಸರ ಹಾಗೂ ಸಾಕ್ಷರತಾ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ.

ಈ ನಿಟ್ಟಿನಲ್ಲಿ ಗುರುವಾರ ಸಂಜೆ 6 ಗಂಟೆಗೆ ಈ ಸೈಕಲ್ ಜಾಥಾವು ದಾವಣಗೆರೆಗೆ ಬಂದು ತಲುಪಲಿದೆ. ದಾವಣಗೆರೆಯ ರೋಟರಿ ಬಾಲಭವನದಲ್ಲಿ ಇವರುಗಳು ಸಾಕ್ಷರತಾ, ಪರಿಸರ ಹಾಗೂ ಸೈಕಲ್ ಜಾಥಾದ ಕುರಿತು ತಮ್ಮ ಅನುಭವವನ್ನು ಹಂಚಿಕೊಳ್ಳಲಿದ್ದಾರೆ. ಈ ಕಾರ್ಯಕ್ರಮಕ್ಕೆ ಸೈಕಲ್ ಆಸಕ್ತರೂ, ವಿದ್ಯಾರ್ಥಿಗಳೂ, ರೋಟರ್ಯಾಕ್ಟ್‌ಸ್ ಹಾಗೂ ರೋಟರಿ ಸದಸ್ಯರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ರೋಟರಿ ಕ್ಲಬ್ ದಾವಣಗೆರೆ ದಕ್ಷಿಣದ ಅಧ್ಯಕ್ಷ ಡಾ. ಸುಜಿತ್‌ಕುಮಾರ್ ಎಸ್.ಹೆಚ್. ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಂಬೇಡ್ಕರ್‌ಗೆ ಅವಮಾನಿಸಿದ ನ್ಯಾಯಾಧೀಶರ ವಜಾಕ್ಕೆ ಡಿಎಸ್‌ಎಸ್ ಆಗ್ರಹ




ದಾವಣಗೆರೆ, ಫೆ.2- ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಅವಮಾನಿಸಿದ ರಾಯಚೂರು ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಬೇಕು ಹಾಗೂ ನ್ಯಾಯಾಧೀಶರ ಹುದ್ದೆಯಿಂದ ವಜಾಗೊಳಿಸಬೇಕೆಂದು ಒತ್ತಾಯಿಸಿ, ಕರ್ನಾಟಕ ದಲಿತ ಸಂಘರ್ಷ ಸಮಿತಿಯಿಂದ ನಗರದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಜಮಾಯಿಸಿದ್ದ ಸಮಿತಿ ಪದಾಧಿಕಾರಿಗಳು ಪ್ರತಿಭಟಿಸಿ, ನಂತರ ಜಿಲ್ಲಾಧಿಕಾರಿಗಳ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಗಣರಾಜ್ಯೋತ್ಸವದಲ್ಲಿ ಅಂಬೇಡ್ಕರ್ ಭಾವಚಿತ್ರ ತೆಗೆಸಿ, ಧ್ವಜಾರೋಹಣ ಮಾಡಿರುವುದು ಅಂಬೇಡ್ಕರ್ ಹಾಗೂ ಸಂವಿಧಾನಕ್ಕೆ ಮಾಡಿರುವ ಅವಮಾನವಾಗಿದೆ. ಇಂತಹ ಕೆಲಸವನ್ನು ಪೂರ್ವಾಗ್ರಹ ಪೀಡಿತ ಮನಸುಗಳು ಮಾತ್ರ ಮಾಡಲು ಸಾಧ್ಯ ಎಂದು ಸಮಿತಿಯ ರಾಜ್ಯ ಸಂಚಾಲಕ ಹೆಚ್. ಮಲ್ಲೇಶ್ ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಹೆಚ್.ಸಿ. ಮಲ್ಲಪ್ಪ, ಎಸ್. ವೆಂಕಟೇಶ್, ಸೀತಮ್ಮ ಆವರಗೆರೆ, ಸಮಾದೆಪ್ಪ ಶಾಮನೂರು, ಬಿ.ಎಸ್. ಲೋಕೇಶ್, ಎಂ. ಚಂದ್ರಪ್ಪ ಶಿವು, ಚನ್ನಬಸಪ್ಪ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ಹಿಜಾಬ್ ವಿವಾದ

**(1ನೇ ಪುಟದಿಂದ)** ಹೇಳಿರುವು ದರಿಂದ ಸಮಸ್ಯೆ ಬಗೆಹರಿದಿಲ್ಲ. ಆದರೆ, ವಿದ್ಯಾರ್ಥಿಗಳು ಸಮವಸ್ತ್ರಕ್ಕೆ ಬದ್ಧರಾಗಿರಬೇಕೆಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಈ ನಡುವೆ, ಭದ್ರಾವತಿಯ ಸರ್ಕಾರಿ ಕಲಾ ಮತ್ತು ವಾಣಿಜ್ಯ ಪದವಿ ಕಾಲೇಜಿನ ಕೆಲ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿದ್ದಾರೆ. ಮತ್ತೊಂದೆಡೆ ಇನ್ನೂ ಕೆಲ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಬಂದಿದ್ದಾರೆ. ಅಹಿತಕರ ಘಟನೆಗಳು ನಡೆಯದಂತೆ ಕಾಲೇಜಿಗೆ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ.

ಈ ಬಗ್ಗೆ ಮಾತನಾಡಿರುವ ಸರ್ ಎಂ.ವಿ. ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜಿನ ಪ್ರಾಂಶುಪಾಲ ಡಾ ಉಮಾಶಂಕರ್, ಕಾಲೇಜಿನಲ್ಲಿ ಹಿಂದಿನಿಂದಲೂ ಸಮವಸ್ತ್ರ ಕಡ್ಡಾಯವಿದೆ. ಹಿಜಾಬ್ ಧರಿಸಿ ಬರುವ ವಿದ್ಯಾರ್ಥಿನಿಯರು, ಕಾಲೇಜಿನ ವೇಯ್ಟಿಂಗ್ ರೂಂನಲ್ಲಿ ಅದನ್ನು ತೆಗೆದು ಸಮವಸ್ತ್ರದಲ್ಲೇ ತರಗತಿಗೆ ಬರಬೇಕು. ಗುರುವಾರದಿಂದ ಈ ನಿಯಮ ಕಡ್ಡಾಯಗೊಳಿಸಲಾಗಿದೆ ಎಂದಿದ್ದಾರೆ.

ಈ ಹಿಂದೆ ಉಡುಪಿ ಕಾಲೇಜಿನಲ್ಲೂ ಇದೇ ರೀತಿಯ ವಿವಾದ ಉಂಟಾಗಿತ್ತು. ಹಿಜಾಬ್ ಧರಿಸಲು ಅವಕಾಶ ನೀಡುವಂತೆ ಕೆಲವರು ಈಗ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

## ರಾಜ್ಯದ 88 ಬೃಹತ್ ಉದ್ಯಮಗಳಿಗೆ ಅಸ್ತು

**(1ನೇ ಪುಟದಿಂದ)** ಕೋಟಿ ರೂ. ಬಂಡ ವಾಳ ರಾಜ್ಯದಲ್ಲಿ ಹೂಡಿಕೆ ಯಾಗಲಿದ್ದು, ಇದರಿಂದ 10,904 ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ನಿರೀಕ್ಷಿಸಲಾಗಿದೆ

50 ಕೋಟಿ ರೂಪಾಯಿಗೂ ಹೆಚ್ಚು ಬಂಡವಾಳ ಹೂಡಿಕೆಯ 7 ಬೃಹತ್ ಮತ್ತು ಮಧ್ಯಮ ಯೋಜನೆಗಳಿಗೆ ಸಮಿತಿ ಅನುಮೋದನೆ ನೀಡಿದ್ದು, ಒಟ್ಟು 799.1 ಕೋಟಿ ರೂ. ಬಂಡವಾಳ ಹೂಡಿಕೆಯಾಗಲಿದ್ದು, ಅಂದಾಜು 3237 ಜನರಿಗೆ ಉದ್ಯೋಗ ಲಭಿಸಲಿವೆ.

15 ಕೋಟಿ ರೂ. ಗಳಿಂದ 50 ಕೋಟಿ ಒಳಗಿನ ಬಂಡವಾಳ ಹೂಡಿಕೆಯ 78 ಯೋಜನೆಗಳಿಗೆ ಅನುಮೋದಿಸಿದ್ದು, ಒಟ್ಟು 14,31.74 ಕೋಟಿ ರೂ. ಹೂಡಿಕೆ ಮಾಡಲಿದ್ದು, ಸುಮಾರು 7,667 ಉದ್ಯೋಗಗಳು ಸೃಜನೆಯಾಗಲಿವೆ ಎಂದವರು ಹೇಳಿದರು.

## ನಿಟುವಳ್ಳಿ : ಸರ್ಕಾರಿ ಕಾಲೇಜು ಕೊಠಡಿ ಕಾಮಗಾರಿ ಕಳಪೆ - ಪ್ರತಿಭಟನೆ



ದಾವಣಗೆರೆ,ಫೆ.2- ನಿಟುವಳ್ಳಿಯ ಆರ್.ಎಂ.ಎಸ್.ಎ. ಸರ್ಕಾರಿ ಕಾಲೇಜಿನಲ್ಲಿ ಸ್ಮಾರ್ಟ್ ಸಿಟಿ ವತಿಯಿಂದ ನಿರ್ಮಿಸುತ್ತಿರುವ 4 ಕೊಠಡಿಗಳ ಕಾಮಗಾರಿಯು ಕಳಪೆಯಿಂದ ಕೂಡಿದೆ ಎಂದು ಆರೋಪಿಸಿ ಇಲ್ಲಿನ ನಾಗರಿಕರು ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಸವಿತಾ ಗಣೇಶ್ ಹುಲ್ಲುಮನೆ ಅವರ ನೇತೃತ್ವದಲ್ಲಿ ಇಂದು ಪ್ರತಿಭಟಿಸಿದರು.

## ಸಂಕ್ಲೀಪುರ : ಆರೋಗ್ಯವಂತ ಶಿಶು ಪ್ರದರ್ಶನ



ಮಲೇಬೆನ್ನೂರು, ಫೆ.2- ದೇವರಬೆಳಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯ ಸಂಕ್ಲೀಪುರ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಆರೋಗ್ಯವಂತ ಶಿಶುಗಳ ಪ್ರದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಸುಧಾ ಮೈಲಾರಪ್ಪ ಪ್ರದರ್ಶನದಲ್ಲಿ ಅವರ ಪುತ್ರಿ ಚಂದನಾಗೆ ಪ್ರಥಮ ಬಹುಮಾನ ಮತ್ತು ಶೋಭಾ ಮಂಜುನಾಥ್ ಅವರ ಪುತ್ರಿ ನಿತ್ಯಶ್ರೀಗೆ ದ್ವಿತೀಯ ಹಾಗೂ ಭಾಗ್ಯ ಬಸವನಗೌಡರ ಪುತ್ರಿ ಚಂದನಾಗೆ ತೃತೀಯ ಬಹುಮಾನವನ್ನು ಹರಳಹಳ್ಳಿ ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಅನುಷಾ ನಾಗರಾಜ್ ವಿತರಿಸಿದರು.

ಈ ವೇಳೆ ವೈದ್ಯಾಧಿಕಾರಿ ಡಾ. ರಮೇಶ್ ಮಾತನಾಡಿ, ತಾಯಿ ಗರ್ಭಿಣಿಯಾಗಿದ್ದಾಗ ಸೊಪ್ಪು, ತರಕಾರಿ, ಮೊಟ್ಟೆ, ಹಣ್ಣು, ಮೊಳಕೆ ಕಾಳುಗಳನ್ನು ಉಪಯೋಗಿಸಬೇಕು. ಆಗ ಹುಟ್ಟುವ ಮಕ್ಕಳೂ ಕೂಡಾ ಆರೋಗ್ಯದಿಂದ ಇರುತ್ತಾರೆ ಎಂದರು.

ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಉಮ್ಮಣ್ಣ, ಗ್ರಾ.ಪಂ. ಸದಸ್ಯೆ ಕಾಂತಮ್ಮ, ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಲಕ್ಷ್ಮಿ, ಆಶಾ ಕಾರ್ಯಕರ್ತೆ ಜ್ಯೋತಿ, ರಂಗಮ್ಮ, ಅಂಗನ ವಾಡಿ ಕಾರ್ಯಕರ್ತೆ ರುದ್ರಮ್ಮ ಭಾಗವಹಿಸಿದ್ದರು.

## ಅಧ್ಯಾತ್ಮ ಬದುಕಿಗೆ ಅಧ್ಯಾತ್ಮಿಕ ಬೆಳಕು 'ಭಜನೆ

**(1ನೇ ಪುಟದಿಂದ)** ಹೇಳಿಕೊಡುವ ಮೂಲಕ ಭಜನೆ ನಡೆಸುತ್ತಿದ್ದಳು. ಭಜನೆಯ ಮೂಲ ಗುರು ತಾಯಿಯೇ ಆಗಿದ್ದಾಳೆ ಎಂದು ಬಣ್ಣಿಸಿದರು.

ಹಿರಿಯ ಜಾನಪದ ಕಲಾವಿದ ಯುಗ ಧರ್ಮ ರಾಮಣ್ಣ ಹಾಡು ಹೇಳುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಯರಗುಂಟೆಯ ಶ್ರೀ ಪರಮೇಶ್ವರ ಸ್ವಾಮೀಜಿ, ಭಜನಾ ಸ್ಪರ್ಧೆ ಸಮಿತಿಯ ಪ್ರಧಾನ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿ ಸ್ವಾಮಿ, ಸಂಘಟನಾ ಕಾರ್ಯದರ್ಶಿ ಎ.ಕೊಟ್ರಪ್ಪ ಕಿತ್ತೂರು, ಎಪಿಎಂಸಿ ಅಧ್ಯಕ್ಷ ಎಸ್.ಕೆ. ಚಂದ್ರಶೇಖರ್, ಹಿರಿಯ ಪತ್ರಕರ್ತ ಬಕ್ಕೇಶ್ ನಾಗನೂರು, ಅಜ್ಜಂಪುರದ ಮೃತ್ಯುಂಜಯ ಉಪಸ್ಥಿತರಿದ್ದರು. ಸಾಲಿಗ್ರಾಮ ಗಣೇಶ್ ಶೆಣೈ ಕಾರ್ಯಕ್ರಮ ನಿರೂಪಿಸಿದರು. ವೀರೇಶ್ವರ ಪುಣ್ಯಾಶ್ರಮದ ವಿದ್ಯಾರ್ಥಿಗಳು ಪ್ರಾರ್ಥಿಸಿದರು.

## ಆಕಾಂಕ್ಷಿಗಳಿಗೆ ಮಣಿದ ಸಿಎಂ

**(1ನೇ ಪುಟದಿಂದ)** ಸಂದರ್ಭ ದಲ್ಲಿ ಮುಖ್ಯಮಂತ್ರಿಯವರು ವರಿಷ್ಠರನ್ನು ಭೇಟಿ ಮಾಡಿ, ರಾಜಕೀಯ ವಿಷಯ ಗಳ ಬಗ್ಗೆ ಚರ್ಚೆ ಮಾಡುವುದಲ್ಲದೆ, ಸಂಸದರ ಜೊತೆ ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಚರ್ಚೆ ಮಾಡಲಿ ದ್ದಾರೆ. ಅಂತರ್‌ರಾಜ್ಯಗಳ ಜಲ ವಿವಾದಗಳ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯವನ್ನು ಪ್ರತಿನಿಧಿಸುತ್ತಿರುವ ವಕೀಲರ ಜೊತೆ ಇದೇ ಸಂದರ್ಭದಲ್ಲಿ ಸಮಾಲೋಚನೆ ನಡೆಸಲಿದ್ದಾರೆ.

## ರೇಷ್ಮೆ ಗೂಡಿಗೆ ದಾಖಲೆ ಸಾವಿರ ರೂ. ಬೆಲೆ

**(1ನೇ ಪುಟದಿಂದ)** ಗೂಡಿಗೆ ಹೆಚ್ಚಿನ ದರ ಸಿಗದಂತೆ ನಿಯಂತ್ರಿಸುತ್ತಿದ್ದ ದಲ್ಲಾಳಿಗಳಿಗೆ ಕಡಿವಾಣ, ಮಾರುಕಟ್ಟೆಗಳಲ್ಲಿ ಸಿಸಿಟಿವಿ ಅಳವಡಿಕೆ, ರೇಷ್ಮೆ ಬೆಳೆಗಾರರಿಗೆ ಆಗುತ್ತಿದ್ದ ಕಿರುಕುಳಕ್ಕೆ ಬ್ರೇಕ್, ರೇಷ್ಮೆಗೂಡು ಕದಿಯುತ್ತಿದ್ದವರ ವಿರುದ್ಧ ಎಫ್‌ಐಆರ್ ದಾಖಲಿಸಿ ಕಠಿಣ ಕ್ರಮ, ಇ-ಪೇಮೆಂಟ್ ವ್ಯವಸ್ಥೆ ಜಾರಿ ಸೇರಿದಂತೆ ಹಲವು ದಿಟ್ಟ ಕ್ರಮಗಳು ದರ ಹೆಚ್ಚಳಕ್ಕೆ ಕಾರಣ ಎಂದು ಸಚಿವರು ತಿಳಿಸಿದ್ದಾರೆ.

## ನಗರದಲ್ಲಿ ಇಂದು ಶರಣ ಸಂಗಮ

ಬಸವ ಕೇಂದ್ರ, ಶ್ರೀ ಮುರುಘರಾಜೇಂದ್ರ ವಿರಕ್ತಮಠ, ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ವತಿಯಿಂದ ಇಂದು ಸಂಜೆ 6.30 ಕ್ಕೆ ಶಿವಯೋಗಾಶ್ರಮದಲ್ಲಿ ನಡೆಯಲಿದೆ.

ಅಧ್ಯಕ್ಷತೆಯನ್ನು ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ವಹಿಸುವರು. ಶ್ರೀ ಬಸವಪ್ರಭು ಸ್ವಾಮೀಜಿ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಯುವುದು.

ಕಾರ್ಯಕ್ರಮದಲ್ಲಿ ಪ್ರೊ. ಹೆಚ್. ಲಿಂಗಪ್ಪ ಅವರ 'ಅರಿವಿನ ಸಿರಿ ಚನ್ನಬಸವಣ್ಣ' ಕೃತಿ ಬಿಡುಗಡೆಗೊಳಿಸಲಾಗುವುದು. ಮುಖ್ಯ ಅತಿಥಿಗಳಾಗಿ ಕೆ.ಬಿ. ರಾಮಚಂದ್ರಪ್ಪ, ಕಲ್ಲೇಶ್, ಡಾ. ಎನ್.ಜೆ. ಶಿವಕುಮಾರ್ ಆಗಮಿಸುವರು. 'ಸಾಮಾಜಿಕ ಸಾಮರಸ್ಯಕ್ಕೆ ಎದುರಾಗುವ ಅಡಚಣೆಗಳೇನು?' ವಿಷಯ ಕುರಿತು ಟಿ.ಪಿ. ಜ್ಞಾನಮೂರ್ತಿ ಉಪನ್ಯಾಸ ನೀಡುವರು. ಕಾರ್ಯಕ್ರಮದಲ್ಲಿ ರಂಗನಿಕೇತನ ದಾವಣಗೆರೆ ತಂಡದ ಹೆಚ್. ದುಂಡಿರಾಜ್ ಅವರ ಹಾಸ್ಯ ನಾಟಕ ಮಹಾಂತೇಶ ಆದಿಮ ಅವರ 'ಪುಕ್ಕಟೆ ಸಲಹೆ' ಪ್ರದರ್ಶನಗೊಳ್ಳುವುದು.

## ನಿರಾಶ್ರಿತರಿಂದ ಅರ್ಜಿ ಅಹ್ವಾನ

ದಾವಣಗೆರೆ, ಫೆ.2- ನಗರದ ವನಿತಾ ಸಮಾಜದ ಅಂಗ ಸಂಸ್ಥೆ 'ಆಶ್ರಯ' ಹಿರಿಯ ವನಿತೆಯರ ಆನಂದ ಧಾಮವು ನಿರಾಶ್ರಿತ ಮಹಿಳೆಯರು, ವಿಧವೆಯರು, ಅವಿವಾಹಿತರು, ಮಕ್ಕಳು ಇದ್ದೂ ಅವರನ್ನು ನೋಡಿಕೊಳ್ಳದವರು, ಅನಾಥರು ಮತ್ತು ಅಬಲೆಯರಿಗೆ ಆಸರೆ ನೀಡುತ್ತಿದೆ. ವಿವರಕ್ಕೆ ಸಂಪರ್ಕಿಸಿ : 94806 87273,98448 50414,98451 66724.

## ಮೂಲ ಕ್ರಯಪತ್ರಗಳು ಕಳೆದಿವೆ

ಸುಮನ್ ಗಣೇಶರಾವ್, ವಾಸ: #348/ಎ, ಸಿ. ಭಾಸ್ಕರಪ್ಪ ಕಾಂಪೌಂಡ್, ತಿಪಟೂರು ಟೌನ್, ತುಮಕೂರು ಜಿಲ್ಲೆ ವಾಸಿಯಾದ ನಾನು ಈ ಮೂಲಕ ತಿಳಿಸುತ್ತಿರುವುದೇನೆಂದರೆ, ದಾವಣಗೆರೆ ನಗರದ ಮಂಡಿಪೇಟೆಯಲ್ಲಿದ್ದ ನಮ್ಮ ತಂದೆಯವರ ಮನೆಯನ್ನು ಎಂಸಿಸಿ 'ಎ' ಬ್ಲಾಕ್‌ಗೆ ಬದಲಿ ಮಾಡುವ ಸಂದರ್ಭದಲ್ಲಿ ದಾವಣಗೆರೆಯ ವಾರ್ಡ್ ನಂ.32ರ ಎಂಸಿಸಿ 'ಬಿ' ಬ್ಲಾಕ್ 3ನೇ ಮೇನ್‌ನಲ್ಲಿರುವ ನನ್ನ ಸೈಟ್ ನಂ.231ರ ಚಾಲ್ತಿ ಡೋರ್ ನಂ.2812/1 ಮತ್ತು 2812/2ರ ಖಾಲಿ ನಿವೇಶನಕ್ಕೆ ಸಂಬಂಧಪಟ್ಟ ಮೂಲ ದಾಖಲೆಗಳುಳ್ಳ ಸಂಪೂರ್ಣ ಕಡತ ಆಕಸ್ಮಿಕವಾಗಿ ಕಳೆದುಹೋಗಿರುತ್ತವೆ. ಸದರಿ ಕಡತದಲ್ಲಿ ದಿನಾಂಕ: 27.08.1984ರ ಅಸಲಿ ಕ್ರಯಪತ್ರಮತ್ತು ದಿನಾಂಕ: 27.08.1994ರ 2 ಅಸಲಿ ಕ್ರಯಪತ್ರಗಳು ಹೀಗೆ ಒಟ್ಟು ಮೂರು ಅಸಲಿ ಕ್ರಯಪತ್ರಗಳು ಹಾಗೂ ಇನ್ನಿತರೆ ಕಂದಾಯ ದಾಖಲೆಗಳು ಇರುತ್ತವೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಬಡಾವಣೆ ಪೊಲೀಸ್ ಠಾಣೆಯಲ್ಲಿ ಸಂಖ್ಯೆ: 0147710/2022ರಂತೆ ದೂರು ದಾಖಲಾಗಿರುತ್ತದೆ. ಸದರಿ ಮೂಲ ಕ್ರಯಪತ್ರಗಳು ಅಥವಾ ಕಡತ ಯಾರಿಗಾದರೂ ದೊರಕಿದಲ್ಲಿ ಕೆಳಕಂಡ ವಿಳಾಸ (#2583/2, 4ನೇ ಮೇನ್, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ. ಮೊ.ನಂ.: 9449246225)ಕ್ಕೆ ಅಥವಾ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಲು ಕೋರಿದೆ.


**School Materials For Sale**

Nursery Children Tables, Chairs, Office Chairs, Table Fans, Green Boards, Notice Boards, Steel Hand Chairs, Amplifer with Speakers Chairs & Toys & Stationery Items, Available in good Conditions for Sales.

**Contact From : 10.00 am to 2.00 pm**

**Mobi : 86602 59263**

**CHINTUS NATIONAL SCHOOL**

Opp. : S.S. Park, Beside Dist Court Devaraj Urs Layout, Davangere.


## ಕ್ರಿಪ್ಟೋ ತೆರಿಗೆಯಿಂದ ಕಾನೂನು ಮಾನ್ಯತೆ ಸಿಗದು : ಸಿ.ಬಿ.ಡಿ.ಟಿ.

**(1ನೇ ಪುಟದಿಂದ)** ಪ್ರವೇಶಿಸಲು ಇದು ಸಕಾಲವಾಗಿದೆ. ವರ್ಚ್ಯುಯಲ್ ಡಿಜಿಟಲ್ ಆಸ್ತಿಗಳಲ್ಲಿ ಅಪಾರ ಹೆಚ್ಚಳವಾಗಿದೆ ಎಂದು ಮೊಹಾಪಾತ್ರ ತಿಳಿಸಿದ್ದಾರೆ.

ಯಾವುದೇ ವಹಿವಾಟು ಕಾನೂನು ಬದ್ಧವೇ ಎಂಬುದನ್ನು ಆದಾಯ ತೆರಿಗೆ ಇಲಾಖೆ ಯೋಚಿಸುತ್ತಾ ಕುಳಿತುಕೊಳ್ಳುವುದಿಲ್ಲ. ವಹಿವಾಟು ನಡೆಸಿದ ಕಾರಣಕ್ಕಾಗಿ ಆದಾಯ ದೊರೆಯಿತೇ ಎಂಬುದನ್ನು ಮಾತ್ರ ಇಲಾಖೆ ಹಾಗೂ ಆದಾಯ ತೆರಿಗೆ ಕಾಯ್ದೆ ಪರಿಗಣಿಸುತ್ತದೆ. ನಾವು ಆದಾಯದ ಕಾನೂನು ಬದ್ಧತೆ ಪರಿಗಣಿಸುವುದಿಲ್ಲ, ಆದಾಯಕ್ಕೆ ತೆರಿಗೆ ಹಾಕುವುದಕ್ಕೆ ಮುಂದಾಗುತ್ತವೆ ಎಂದು ಮೊಹಾಪಾತ್ರ ಹೇಳಿದ್ದಾರೆ.

ದೇಶದಲ್ಲಿ ಕ್ರಿಪ್ಟೋ ಆಸ್ತಿ ಎಷ್ಟಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಆದರೆ, ಅನಧಿಕೃತ ಮಾಹಿತಿಯ ಪ್ರಕಾರ ದೇಶದಲ್ಲಿ 40 ಕ್ರಿಪ್ಟೋ ವಿನಿಮಯ ಕೇಂದ್ರಗಳಿವೆ. 2017ರ ನಂತರ ಕ್ರಿಪ್ಟೋ ವಾರ್ಷಿಕ ವಹಿವಾಟು 30 ಸಾವಿರ ಕೋಟಿ ರೂ.ಗಳಿಂದ ಲಕ್ಷ ಕೋಟಿ ರೂ.ಗಳವರೆಗೆ ಇದೆ ಎಂದು ಹೇಳಲಾಗುತ್ತಿದೆ.

## ಗಡಿಚೌಡೇಶ್ವರಿ ದೇವಿ, ಆಂಜನೇಯ ಸ್ವಾಮಿ ದೇವಸ್ಥಾನಗಳ ವಾರ್ಷಿಕೋತ್ಸವ

ಕುಂದುವಾಡದ ಶ್ರೀ ಗಡಿಚೌಡೇಶ್ವರಿ ದೇವಿಯ 17ನೇ ವಾರ್ಷಿಕೋತ್ಸವ ಮತ್ತು ಶ್ರೀ ಆಂಜನೇಯ ಸ್ವಾಮಿ ದೇವ ಸ್ಥಾನದ 13ನೇ ವಾರ್ಷಿಕೋತ್ಸವ ಸಮಾರಂಭವು ಇಂದು-ನಾಳೆ ನಡೆಯಲಿದೆ. ಇಂದು ಬೆಳಿಗ್ಗೆ 6.30 ಕ್ಕೆ ಪಂಚಾಮೃತ ಅಭಿಷೇಕ, ಶ್ರೀ ಭಾವಸಾರ ಕ್ಷತ್ರಿಯ ದೈವ ಮಂಡಳಿ (ರಿ.ನಂ. 7) ಮತ್ತು ಭಾವಸಾರ ದೈವ ಮಂಡಳಿ (ರಿ.ನಂ. 6) ಹಾಗೂ ನಾಮದೇವ ಗೊಂದಲಿ ಸಮಾಜ ಬಾಂಧವರಿಂದ ಸಂಜೆ 6 ಗಂಟೆಗೆ ಪೋತಿ ಸ್ಥಾಪನೆ, ಭಜನೆ ನಡೆಯುವುದು. ನಾಳೆ ಶುಕ್ರವಾರ ಬೆಳಿಗ್ಗೆ 5.30 ಕ್ಕೆ ಕಾಕಡಾರತಿ, ನಂತರ ಭಜನೆ, 8.30 ಕ್ಕೆ ಸಮಾಜ ಬಾಂಧವರಿಂದ ಮೆರವಣಿಗೆ ಹಾಗೂ 9 ಕ್ಕೆ ಭಜನೆ, ಮಧ್ಯಾಹ್ನ 12 ಕ್ಕೆ ಪ್ರಸಾದ ವಿನಿಯೋಗ ಏರ್ಪಾಡಾಗಿದೆ.

## ಜಿಲ್ಲೆಯಲ್ಲಿ 160 ಪಾಸಿಟಿವ್, 2 ಸಾವು

**(1ನೇ ಪುಟದಿಂದ)** ಸೋಂಕು ಕಾಣಿಸಿಕೊಂಡಿದೆ. ದಾವಣಗೆರೆಯ ಎಸ್.ಎ. ರವೀಂದ್ರನಾಥ್ ನಗರದ 63 ವರ್ಷದ ಪುರುಷ ಹಾಗೂ ವಿವೇಕಾನಂದ ಬಡಾವಣೆಯ 72 ವರ್ಷದ ವೃದ್ಧ ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ. ಪ್ರಸ್ತುತ ಜಿಲ್ಲೆಯಲ್ಲಿ 1141 ಸಕ್ರಿಯ ಪ್ರಕರಣಗಳಿವೆ.


**FUTURE 4 I T TRAINING ACADEMY**

GREAT OPPORTUNITIES FOR FRESHERS
TRAINING & PLACEMENTS
BE, B.TECH, BSC, BCA, MCA, M.TECH, MSC,ME
(CSE,ECE, EEE, IT, CS, CIVIL, MECHANICAL)
PASSOUT YEARS 2019, 2020, 2021, 2022
PERCENTAGE 60% ABOVE
PACKAGE 3L TO 4.2L
TRAINING LOCATION DAVANGERE OFFLINE AND ONLINE
COMPANIES- HCL/IBM/TECH M/ACCENTURE/ WIPRO/INFOSYS/ L&T/MINDTREE/GLOBAL LOGIC/MPHASIS/VIRTUSA/H P/ETC
PLACEMENTS LOCATIONS BANGALORE/ HYDERABAD/CHENNAI/PUNE
DURATION 90 DAYS WITH PLACEMENTS
More Details Call Or WhatsApp : 8618111804 / 8618189312
Email - info@future4it.in


## ಸಾರ್ವಜನಿಕ ಪ್ರಕಟಣೆ

**ಕುಮಾರನಾಯ್ಕ ಪಿ.** ಆದ ನಾನು ದಾವಣಗೆರೆ ತಾಲ್ಲೂಕು ತೋಳಹುಣಸೆಯ ಯಲ್ಲಮ್ಮ ನಗರದಲ್ಲಿ ವಾಸವಾಗಿದ್ದೇನೆ. ನನ್ನ ಮೊದಲ ಮಗಳು ಶ್ರದ್ಧ ಕೆ. ನಾಯ್ಕ ಯಾನೆ ಶ್ರದ್ಧ ಕೆ. ಎಂದು ತಪ್ಪಾಗಿದ್ದು, ಅದನ್ನು **ಶ್ರದ್ಧ ಕೆ.** ಎಂದೂ, ಎರಡನೇ ಮಗಳು ಶ್ರೇಷ್ಠ ಕೆ. ನಾಯ್ಕ ಯಾನೆ ಶ್ರೇಷ್ಠ ಕೆ. ಎಂದು ತಪ್ಪಾಗಿದ್ದು, ಅದನ್ನು **ಶ್ರೇಷ್ಠ ಕೆ.** ಎಂದೂ ಸರಿಪಡಿಸಿ ದಿನಾಂಕ 2.2.2022ರಂದು ದಾವಣಗೆರೆ ನೋಟರಿಯವರ ಸಮ್ಮುಖದಲ್ಲಿ ಪ್ರಮಾಣ ಮಾಡಿರುತ್ತೇನೆ. ಮಹಾನಗರ ಪಾಲಿಕೆ ಜನನ ಪ್ರಮಾಣ ಪತ್ರದಲ್ಲಿ ಸರಿಪಡಿಸುವ ಉದ್ದೇಶದಿಂದ ಈ ಪ್ರಮಾಣ ಪತ್ರವನ್ನು ಮಾಡಿಸಿರುತ್ತೇನೆ.

- **ಕುಮಾರನಾಯ್ಕ ಪಿ.** ಮತ್ತು **ಶ್ರೀಮತಿ ಬಾಗೀಬಾಯಿ**

ಮೊಬೈಲ್ : 78928 53869

# ಉಡುಗೊರೆಯ ನೋಟ್ ಪುಸ್ತಕ ಮಕ್ಕಳಿಗೆ ಸಮರ್ಪಿಸಿದ ಮೇಯರ್



ದಾವಣಗೆರೆ, ಫೆ.2- ನಗರ ಪಾಲಿಕೆ ಮೇಯರ್ ಎಸ್. ಟಿ. ವೀರೇಶ್ ಅವರು ತಮಗೆ ಉಡುಗೊರೆಯಾಗಿ ಬಂದಿದ್ದ ನೋಟ್ ಪುಸ್ತಕಗಳ ಸದ್ಬಳಕೆಗಾಗಿ ಸರ್ಕಾರಿ ಶಾಲಾ ಮಕ್ಕಳಿಗೆ ಅವುಗಳನ್ನು ಸಮರ್ಪಿಸುವ ಕಾರ್ಯಕ್ಕೆ ಇಂದು ಚಾಲನೆ ನೀಡಿದ್ದಾರೆ. ಆ ಮುಖೇನ ಸರ್ಕಾರಿ ಶಾಲಾ ಮಕ್ಕಳ ಶೈಕ್ಷಣಿಕ ಪ್ರಗತಿಯ ಹಂಬಲ ವ್ಯಕ್ತಪಡಿಸಿದ್ದಾರೆ.

ಸ್ಥಳೀಯ ಶ್ರೀರಾಮನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರುವರೆ ಸಾವಿರ ನೋಟ್ ಪುಸ್ತಕಗಳು ಮತ್ತು ಪೆನ್ನುಗಳನ್ನು ವಿತರಿಸುವ ಕಾರ್ಯಕ್ಕೆ ಇಂದು ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಶಿಕ್ಷಣವೊಂದಿದ್ದರೆ ಭವಿಷ್ಯ ಉತ್ತಮವಾಗಿ ರೂಪುಗೊಳ್ಳುವುದರ ಜೊತೆಗೆ ದೇಶದ ಪ್ರಗತಿ ಸಾಧ್ಯ ಎಂಬುವುದರಲ್ಲಿ ನಂಬಿಕೆ ಹೊಂದಿದ್ದೇನೆ. ಈ ಹಿನ್ನೆಲೆಯಲ್ಲಿ ಬಡತನದಲ್ಲಿನ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವ ಕಲ್ಪನೆ ಬಂದಿತು ಎಂದು ಮೇಯರ್ ವೀರೇಶ್ ಅವರು ತಮ್ಮ ಹಂಬಲವನ್ನು ಅಭಿವ್ಯಕ್ತಪಡಿಸಿದರು.

ನಗರ ಪಾಲಿಕೆ ಮಹಾಪೌರನಾದ ದಿನ ನನಗೆ ನಾಗರಿಕರು, ಸ್ನೇಹಿತರು, ಹಿತೈಷಿಗಳು ಅಭಿನಂದನೆ ಸಲ್ಲಿಸಲು ಹಾರ-ಪೇಟೆ ತರುತ್ತಿದ್ದರು. ಇದರಿಂದ ಏನು ಉಪಯೋಗವಿಲ್ಲ ಎಂದು ಮನಗೊಂಡು ಹಾರ-ಪೇಟ ತರಬೇಡಿ, ಅದರ ಬದಲು ನೋಟ್ ಪುಸ್ತಕ ಕೊಡಿ ಎಂಬ ಮನವಿ ಮಾಡಲಾಯಿತು. ಅದು ನನ್ನ ನಿರೀಕ್ಷೆಗೂ ಮೀರಿ ನೋಟ್ ಪುಸ್ತಕಗಳನ್ನು ನಾಗರಿಕರು, ಸ್ನೇಹಿತರು, ನನ್ನ ವಿದ್ಯಾರ್ಥಿ ದೆಸೆಯ ಸಹಪಾಠಿಗಳು ಇಲ್ಲಿಯವರಿಗೆ ಸುಮಾರು ಮೂರೂವರೆ ಸಾವಿರ ನೋಟ್ ಪುಸ್ತಕಗಳನ್ನು ನನಗೆ ನೀಡಿದ್ದಾರೆ. ಅದರೊಂದಿಗೆ ನಾನು ವೈಯಕ್ತಿಕವಾಗಿ ಮೂರು ಸಾವಿರ ಒಟ್ಟು ಆರೂವರೆ ಸಾವಿರ ನೋಟ್ ಪುಸ್ತಕಗಳನ್ನು ನಗರ ವ್ಯಾಪ್ತಿಯಲ್ಲಿನ ಸರ್ಕಾರಿ ಶಾಲೆಯ ಮಕ್ಕಳಿಗೆ ಇಂದಿನಿಂದ ತಲುಪಿಸುವ ಕೆಲಸ ಪ್ರಾರಂಭಿಸಿದ್ದೇನೆ ಎಂದು ಹರ್ಷ ವ್ಯಕ್ತಪಡಿಸಿದರು.

ಪಾಲಿಕೆಯ ನಗರ ಯೋಜನೆ ಅಭಿವೃದ್ಧಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಉಮಾ ಪ್ರಕಾಶ್, ಪಾಲಿಕೆ ಸದಸ್ಯ ಪ್ರಸನ್ನ ಕುಮಾರ್ ಅವರುಗಳು ಮಾತನಾಡಿ, ಮೇಯರ್ ವೀರೇಶ್ ಅವರು ಶಾಲಾ ಮಕ್ಕಳಿಗೆ ನೋಟ್ ಪುಸ್ತಕ ವಿತರಣೆ ಮಾಡುತ್ತಿರುವುದು ಅವರ ಸಾಮಾಜಿಕ ಕಳಕಳಿಗೆ ಸಾಕ್ಷಿಯಾಗಿ ನಿಂತಿದೆ ಎಂದರು.

ಪಾಲಿಕೆ ಸದಸ್ಯರಾದ ಗೀತಾ ನಾಗರಾಜ್, ಜಯಮ್ಮ ಗೋಪಿನಾಯ್ಕ, ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಹನುಮಂತಪ್ಪ, ವರದಿಗಾರರ ಕೂಟದ ಮಾಜಿ ಅಧ್ಯಕ್ಷ ಏಕಾಂತಪ್ಪ, ಮುಖಂಡರಾದ ಗೋಪಿನಾಯ್ಕ, ರಮೇಶ್, ಸಿದ್ದಣ್ಣ ಮತ್ತಿತರರಿದ್ದರು.

ದೀಕ್ಷಿತಾ, ಮಹಾಲಕ್ಷ್ಮಿ ಸಂಗಡಿಗರು ಪ್ರಾರ್ಥಿಸಿದರು. ಶಾಲೆಯ ಮುಖ್ಯ ಶಿಕ್ಷಕ ಶಿವಲಿಂಗಪ್ಪ ಸ್ವಾಗತಿಸಿದರು. ಶಿಕ್ಷಕಿ ಮಮತಾ ಕಾರ್ಯಕ್ರಮ ನಿರೂಪಿಸಿದರು.

## ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಅಗ್ನಿ ಪ್ರವೇಶ -ವಿಶ್ವರೂಪ ದರ್ಶನ



ಎಸ್.ಕೆ.ಪಿ. ರಸ್ತೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರ ಅಗ್ನಿ ಪ್ರವೇಶ ಮತ್ತು ವಿಶ್ವರೂಪ ದರ್ಶನ ಕಾರ್ಯಕ್ರಮವು ಇಂದು ನಡೆಯಲಿದೆ ಎಂದು ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘದ ಅಧ್ಯಕ್ಷ ಆರ್.ಎಲ್. ಪ್ರಭಾಕರ್ ತಿಳಿಸಿದ್ದಾರೆ.

ಬೆಳಿಗ್ಗೆ 10 ಗಂಟೆಯಿಂದ ವಾಸವಿ ಹೋಮ, 102 ಗೋತ್ರದ ಋಷಿ ಪ್ರವರ ಹೋಮ, ಸಂಜೆ 7 ಗಂಟೆಗೆ ಸಹಸ್ರ ಮಾನ ವರ್ಷದ ಅಂಗವಾಗಿ ಕುಲದೇವತೆ ಶ್ರೀ ವಾಸವಾಂಬೆಯ ಜೊತೆಯಲ್ಲಿ ನಮ್ಮದೇ ಗೋತ್ರದ - ನಮ್ಮದೇ ಪೂರ್ವಜ ದಂಪತಿಗಳು ಅಗ್ನಿ ಪ್ರವೇಶದ ಮೂಲಕ ಬಲಿದಾನಗೈದ ಪ್ರತಿ ದಂಪತಿಗಳ ಹೆಸರಿನಲ್ಲಿ ದೀಪ ಬೆಳಗಿಸುವುದರ ಮೂಲಕ ಅವರ ತ್ಯಾಗವನ್ನು ಸ್ಮರಿಸಿ ಕೃತಜ್ಞತೆ ಸಲ್ಲಿಸುವ ಕಾರ್ಯಕ್ರಮವೂ ಜರುಗಲಿದೆ.

ಸಮಾಜ ಬಾಂಧವರು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಸಂಘದ ಕಾರ್ಯದರ್ಶಿ ಜೆ. ರವೀಂದ್ರ ಗುಪ್ತ ಕೋರಿದ್ದಾರೆ.

## ಬಾಳೆಹೊನ್ನೂರಿನಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳ ಪೀಠಾರೋಹಣ



ರಂಭಾಪುರಿ ಪೀಠದ ಜಗದ್ಗುರು ಶ್ರೀ ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ಮಹಾಸ್ವಾಮೀಜಿಗಳವರ 31ನೇ ವರ್ಷದ ಪೀಠಾರೋಹಣ ಮಹೋತ್ಸವ ಇಂದು ಬೆಳಿಗ್ಗೆ 11 ಗಂಟೆಗೆ ಜರುಗಲಿದೆ. ಇಲ್ಲಿನ ಮಹಾಸಂಸ್ಥಾನ ಪೀಠದಲ್ಲಿ ಸರಳ ಹಾಗೂ ಸಾಂಪ್ರದಾಯಿಕವಾಗಿ ಜರುಗುವ ಈ ವರ್ಧಂತಿ ಮಹೋತ್ಸವದಲ್ಲಿ ಶ್ರೀ ಜಗದ್ಗುರುಗಳು ಪೀಠಾರೋಹಣ ಮಾಡಲಿದ್ದಾರೆ.

## ನಾಳೆ ಪಂಚಮಸಾಲಿ ಜಗದ್ಗುರು ಲಿಂಗೈಕ್ಯ ಡಾ।। ಮಹಾಂತ ಶ್ರೀಗಳ 9ನೇ ಪುಣ್ಯಸ್ಮರಣೆ



ಹರಿಹರ


ಹರಿಹರ, ಫೆ.2- ನಾಡಿದ್ದು ದಿನಾಂಕ 4ರ ಶುಕ್ರವಾರ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಲಿಂಗೈಕ್ಯ ಡಾ।। ಮಹಾಂತ ಶಿವಾಚಾರ್ಯ ಮಹಾಸ್ವಾಮೀಜಿಯವರ 9ನೇ ವರ್ಷದ ಪುಣ್ಯ ಸ್ಮರಣೋತ್ಸವವನ್ನು ಇಲ್ಲಿನ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ಆಚರಿಸಲಾಗುವುದು.

ವಿಶೇಷ ಪೂಜೆ ಮತ್ತು ಮಹಾಮಂಗಳಾರತಿ ನಂತರ ಬೆಳಿಗ್ಗೆ 11 ಗಂಟೆಗೆ ಜಗದ್ಗುರು ಮಹಾಂತ ಶ್ರೀಗಳ ಪಾದುಕೆ ಮತ್ತು ಭಾವಚಿತ್ರದ ಪಲ್ಲಕ್ಕಿ ಉತ್ಸವ ಜರುಗುವುದು. ನಂತರ ಮಧ್ಯಾಹ್ನ 12 ಗಂಟೆಗೆ ಶ್ರೀ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಧರ್ಮಸಭೆ ಜರುಗಲಿದೆ.

## ನಗರದ ಪಂಚ ದೇವಸ್ಥಾನಗಳ ಮಹಾಕ್ಷೇತ್ರದಲ್ಲಿ ಇಂದು ವಾರ್ಷಿಕೋತ್ಸವ

ಪಿ.ಬಿ. ರಸ್ತೆಯಲ್ಲಿರುವ ಪಂಚ ದೇವಸ್ಥಾನಗಳ ಮಹಾಕ್ಷೇತ್ರದಲ್ಲಿ ಇಂದಿನಿಂದ ಮೂರು ದಿನ 23 ನೇ ವಾರ್ಷಿಕೋತ್ಸವದ ಕಾರ್ಯಕ್ರಮಗಳು ನಡೆಯಲಿವೆ. ಪ್ರತಿದಿನ ಬೆಳಿಗ್ಗೆ ಪಂಚ ದೇವರುಗಳಿಗೆ ಪಂಚಾಮೃತಾಭಿಷೇಕ, ತೈಲಾಭಿಷೇಕ, ರುದ್ರಾಭಿಷೇಕ, ನವಗ್ರಹ ಶಾಂತಿಯ ವಿಶೇಷ ಪೂಜೆಗಳು ನಡೆಯಲಿವೆ. ಇಂದು ಬೆಳಿಗ್ಗೆ 9.30 ಕ್ಕೆ ಗಣಹೋಮ, ರುದ್ರಹೋಮ, ನಾಳೆ 9.30 ಕ್ಕೆ, ದಿನಾಂಕ 5 ರಂದು ಬೆಳಿಗ್ಗೆ 9 ಕ್ಕೆ ಲಕ್ಷ್ಮಿನರಸಿಂಹಸ್ವಾಮಿ ಹಾಗೂ ಶ್ರೀ ಶನೇಶ್ವರಸ್ವಾಮಿ ಸಹಿತ ನವಗ್ರಹ ಹೋಮ ಹಾಗೂ ತೀರ್ಥ ಪ್ರಸಾದ ವ್ಯವಸ್ಥೆ ಮಾಡಲಾಗಿದೆ.

## ಮಕ್ಕಳ ಫೋಟೋ ಸ್ಪರ್ಧೆ ಫಲಿತಾಂಶ



ದಾವಣಗೆರೆ, ಫೆ.2- ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ರಾಜ್ಯ ಮಟ್ಟದ ಆಕರ್ಷಕ ಮಕ್ಕಳ ಫೋಟೋ ಸ್ಪರ್ಧೆ ನಡೆಸಲಾಯಿತು.

ಕಿರಿಯರ ವಿಭಾಗದಲ್ಲಿ ಪ್ರಥಮ ಬಹುಮಾನವನ್ನು ಮೂರು ಜನ ಹಂಚಿಕೊಂಡಿದ್ದಾರೆ. ಬೆಂಗಳೂರಿನ ಹೆಚ್.ಎನ್. ಯತಿಶ್ರೀ, ನಗರದ ಸಿ. ಆರ್. ರಕ್ಷಾ, ಬೆಂಗಳೂರಿನ ಜಿ. ಸಿರಿ, ದ್ವಿತೀಯ ಬಹುಮಾನ ನಗರದ ಚಿರಸ್ವಿ, ತೃತೀಯ ಬಹುಮಾನ ಧಾರವಾಡದ ಪಾವನಿ ಬಟ್ಟೂರು. ಹಿರಿಯರ ವಿಭಾಗದಲ್ಲಿ ಪ್ರಥಮ ಬಹುಮಾನ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಪ್ರಕೃತಿ ಕಾರಂತ್, ದ್ವಿತೀಯ ಬಹುಮಾನ ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡದ ವಿಜಯಲಕ್ಷ್ಮಿ ಗೋಪಾಲ ಬುಳ್ಳಾ, ತೃತೀಯ ಬಹುಮಾನ ನಗರದ ಹರ್ಷಿತ ಎಂ. ಪಡೆದಿರುತ್ತಾರೆ.

## ಕಾಂಗ್ರೆಸ್‌ಗೆ ಸೂರ್ಯಪ್ರಕಾಶ್ ನೇಮಕ



ದಾವಣಗೆರೆ, ಫೆ.2 - ಜಿಲ್ಲಾ ಪರಿಶಿಷ್ಟ ಜಾತಿ ಕಾಂಗ್ರೆಸ್ ಸಮಿತಿ ಸಂಘಟನಾ ಕಾರ್ಯದರ್ಶಿಯನ್ನಾಗಿ ಆರ್. ಸೂರ್ಯಪ್ರಕಾಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ ತಿಳಿಸಿದ್ದಾರೆ.

## ಮಾದರಿ ವಿದ್ಯಾರ್ಥಿ ನಿಲಯಗಳಾಗಿ ಅಭಿವೃದ್ಧಿಪಡಿಸಲು ಶೀಘ್ರ ಪ್ರಸ್ತಾವನೆ



ಹರಪನಹಳ್ಳಿ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರಾದ ರೇಣುಕಾದೇವಿ

ಹರಪನಹಳ್ಳಿ,ಫೆ.2- ತಾಲ್ಲೂಕಿನಲ್ಲಿ ಕೆಲವೊಂದು ಹಾಸ್ಟೆಲ್‌ಗಳನ್ನು ಮಾದರಿ ಹಾಸ್ಟೆಲ್‌ಗಳನ್ನಾಗಿ ಅಭಿವೃದ್ಧಿಪಡಿಸಲು ಶೀಘ್ರ ಪ್ರಸ್ತಾವನೆ ಕಳಿಸಿಕೊಡಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರಾದ ರೇಣುಕಾದೇವಿ ತಿಳಿಸಿದ್ದಾರೆ.

ಅವರು ಪಟ್ಟಣದ ತಮ್ಮ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಇಲಾಖೆಯ ಉಪನಿರ್ದೇಶಕರು ಜಿಲ್ಲೆಯಲ್ಲಿ ಕೆಲವೊಂದನ್ನು ಮಾದರಿ ಹಾಸ್ಟೆಲ್ ಗಳನ್ನಾಗಿ ಪರಿವರ್ತಿಸುವ ಪರಿಕಲ್ಪನೆ ಹೊಂದಿದ್ದು, ಈ ಕುರಿತು ಪ್ರಸ್ತಾವನೆ ಕಳಿಸಿಕೊಡಲಾಗುವುದು ಎಂದರು.

ತಾಲ್ಲೂಕಿನಲ್ಲಿ ಕೆಲವೊಂದು ಹಾಸ್ಟೆಲ್ ಕಟ್ಟಡಗಳ ಕಾಮಗಾರಿ ಪೂರ್ಣಗೊಂಡಿಲ್ಲ, ತ್ವರಿತವಾಗಿ ಪೂರ್ಣಗೊಳಿಸಿ ನಮಗೆ ಹಸ್ತಾಂತರ ಮಾಡುವ ಕುರಿತು ಸಂಬಂಧಪಟ್ಟವರ ಜೊತೆ ಚರ್ಚಿಸಿರುವೆ ಎಂದು ಹೇಳಿದರು.

ಹಾಸ್ಟೆಲ್ ಗಳಿಗೆ ಹೆಚ್ಚುವರಿ ಕೊಠಡಿ ಹಾಗೂ ಹೆಚ್ಚುವರಿ ಶೌಚಾಲಯಗಳ ನಿರ್ಮಾಣಕ್ಕೆ ಸಹ ಪ್ರಸ್ತಾವನೆ ಸಲ್ಲಿಸಲಾಗುವುದು, ಸ್ಕಾಲರ್ ಶಿಪ್ ಪಡೆಯುವ ಕುರಿತು ವಿದ್ಯಾರ್ಥಿಗಳಿಗೆ ಸರಿಯಾದ ಮಾಹಿತಿ ಕೊಡುತ್ತೇವೆ ಎಂದರು.ಕಲ್ಯಾಣ ಕರ್ನಾಟಕ ಭಾಗದ ಹಿಂದುಳಿದ ಹರಪನಹಳ್ಳಿ ತಾಲೂಕಿನಲ್ಲಿ ಉತ್ತಮ ಕೆಲಸ ನಿರ್ವಹಿಸಲು ಎಲ್ಲರ ಸಹಕಾರ ಅತ್ಯಗತ್ಯ ಎಂದು ಹೇಳಿದರು.


## ಭವಿಷ್ಯ ನಿಧಿ ಮಾಹಿತಿ ಸೋರಿಕೆ : ಸಿಬಿಐ ಪ್ರಕರಣ ದಾಖಲು

ನವದೆಹಲಿ, ಫೆ. 2 – ಖಾಸಗಿ ಭವಿಷ್ಯನಿಧಿ ಕನ್ಸಲ್ಟೆಂಟ್‌ಗಳಿಂದ ಹಣ ಪಡೆದು ಭವಿಷ್ಯನಿಧಿ ಚಂದಾದಾರರ ಮಾಹಿತಿಯನ್ನು ಸೋರಿಕೆ ಮಾಡಿದ ಆಂಧ್ರ ಪ್ರದೇಶದ ಗುಂಟೂರಿನ 20ಕ್ಕೂ ಹೆಚ್ಚು ಇ.ಪಿ.ಎಫ್.ಒ. ಅಧಿಕಾರಿಗಳ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿದೆ.

ಕೆಲ ಅಧಿಕಾರಿಗಳು ಮಾಹಿತಿ ಸೋರಿಕೆ ಮಾಡುತ್ತಿರುವ ಮಾಹಿತಿ ಪಡೆದ ಸಿ.ಬಿ.ಐ., ಹಠಾತ್ ಪರಿಶೀಲನೆ ನಡೆಸಿದಾಗ ಲಂಚ ಪ್ರಕರಣ ಬೆಳಕಿಗೆ ಬಂದಿದೆ.

ಉದ್ಯೋಗಿಗಳ ಮೊಬೈಲ್‌ಗಳನ್ನು ಪರಿಶೀಲಿಸಿದಾಗ ಅವರು ಖಾಸಗಿಯವರಿಂದ ಪೇಟಿಎಂ ರೀತಿಯ ಆಪ್‌ಗಳ ಮೂಲಕ ಹಣ ಪಡೆಯುತ್ತಿರುವುದು ಬಯಲಾಗಿದೆ. ಭವಿಷ್ಯನಿಧಿ ಚಂದಾದಾರರ ಯು.ಎ.ಎನ್., ಪಾಸ್‌ವರ್ಡ್, ಒ.ಡಿ.ಪಿ. ಇತ್ಯಾದಿಗಳನ್ನು ಅವರು ಖಾಸಗಿ ಭವಿಷ್ಯ ನಿಧಿ ಕನ್ಸಲ್ಟೆಂಟ್‌ಗಳಿಗೆ ನೀಡುತ್ತಿದ್ದರು.

## ರಾಣೇಬೆನ್ನೂರು : ಸಿದ್ಧಾರೂಢ ಮಠದಲ್ಲಿ ವೇದಾಂತ ಪರಿಷತ್ ಹಾಗೂ ರಥೋತ್ಸವ




ಶ್ರೀ ಸಿದ್ಧಾರೂಢ ಮಠದಲ್ಲಿ 22 ನೇ ವೇದಾಂತ ಪರಿಷತ್ ಹಾಗೂ 8 ನೇ ಮಹಾರಥೋತ್ಸವ ಇಂದಿನಿಂದ ಮೂರು ದಿನಗಳ ಕಾಲ ನಡೆಯಲಿದೆ ಎಂದು ಪೀಠಾಧಿಪತಿ ಶ್ರೀ ಮಲ್ಲಯ್ಯ ಮಹಾಸ್ವಾಮೀಜಿ ತಿಳಿಸಿದ್ದಾರೆ.

ಇಂದು ಹುಬ್ಬಳ್ಳಿಯ ಶ್ರೀ ಸಚ್ಚಿದಾನಂದ ಸ್ವಾಮೀಜಿ, ನಾಳೆ ಹಂಪೆ ಹೇಮಕೂಟದ ಶ್ರೀ ವಿದ್ಯಾನಂದ ಭಾರತಿ ಶ್ರೀಗಳು, ದಿನಾಂಕ 5 ರಂದು ಹುಬ್ಬಳ್ಳಿಯ ಅಭಿನವ ಸಿದ್ಧಾರೂಢ ಮಹಾಸ್ವಾಮಿಗಳು ಪ್ರವಚನ ನೀಡುವರು. ಸಂಜೆ ಎಲ್ಲ ಪೂಜ್ಯರ ಸಾನ್ನಿಧ್ಯದಲ್ಲಿ ಮಹಾರಥೋತ್ಸವ ಜರುಗಲಿದೆ. 3 ದಿನಗಳ ಕಾರ್ಯಕ್ರಮದ ಸಾನ್ನಿಧ್ಯವನ್ನು ಶ್ರೀ ಮಲ್ಲಯ್ಯಜ್ಜ ವಹಿಸುವರು.

ಸೌಟಗಿ ಲಿಂಗಯ್ಯ ಮಹಾಸ್ವಾಮಿಗಳು, ನೆಲಮಂಗಲದ ಮಾತೋಶ್ರೀ ಉಮಾಭಾರತಿ, ಹುಬ್ಬಳ್ಳಿ ಸಿದ್ಧಾರೂಢ ಮಠದ ಅಧ್ಯಕ್ಷ ಮಟ್ಟಿ ಶೇಖಣ್ಣ, ಬೆಂಗಳೂರಿನ ಬಿ.ಎಂ. ದೇವಯ್ಯ ಪಾಲ್ಗೊಳ್ಳುವರು.

## ನಾಳೆ ಮಾರ್ಕಂಡೇಶ್ವರ ಸ್ವಾಮಿ ಜಯಂತಿ



ದಾವಣಗೆರೆ, ಫೆ.2- ನಗರದ ಕನ್ನಿಕಾ ಪರಮೇಶ್ವರಿ ದೇವಸ್ಥಾನ ರಸ್ತೆಯಲ್ಲಿರುವ ಶ್ರೀ ಮಾರ್ಕಂಡೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಮಾರ್ಕಂಡೇಶ್ವರ ಸ್ವಾಮಿ ಜಯಂತಿ ನಾಡಿದ್ದು ದಿನಾಂಕ 4 ರ ಶುಕ್ರವಾರ ನಡೆಯಲಿದೆ ಎಂದು ಪದ್ಮಶಾಲಿ ಸಮಾಜ ಸೇವಾ ಸಂಘದ ಅಧ್ಯಕ್ಷ ಪಿ.ಜೆ. ನಾಗರಾಜ್ ತಿಳಿಸಿದ್ದಾರೆ.

## ಡಿಜಿಟಲ್ ಪಾವತಿ ತಿರುಚಿ ವಂಚನೆ

**ಹಲವು ರಾಜ್ಯಗಳ ಹೋಟೆಲ್, ಆಭರಣದ ಅಂಗಡಿಗಳಿಗೆ 25 ಲಕ್ಷ ರೂ. ಟೋಪಿ**

ಥಾಣೆ, ಫೆ. 2 – ಡಿಜಿಟಲ್ ಪಾವತಿ ವಿಧಾನವನ್ನು ತಿರುಚಿ ಹಲವು ರಾಜ್ಯಗಳ ಹೋಟೆಲ್ ಮಾಲೀಕರು ಹಾಗೂ ಆಭರಣ ಅಂಗಡಿಯವರನ್ನು ವಂಚಿಸಿದ 33 ವರ್ಷದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ.

97,330 ರೂ.ಗಳ ವಂಚನೆಯಾಗಿರುವುದಾಗಿ ವ್ಯಕ್ತಿಯೊಬ್ಬರು ವರ್ತಕ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ನಂತರ ಆರೋಪಿಯನ್ನು ಪತ್ತೆ ಮಾಡಿ ಬಂಧಿಸಲಾಗಿದೆ.

ಬಂಧಿತ ಸುಬ್ರಮಣ್ಯಂ ರಾಮಕೃಷ್ಣ ಅಯ್ಯರ್ ಮೊದಲು ಆಭರಣ ಖರೀದಿಸುತ್ತಿದ್ದ ಇಲ್ಲವೇ ಹೋಟೆಲ್ ಕೋಣೆಗಳನ್ನು ಬುಕ್ ಮಾಡುತ್ತಿದ್ದ. ಹಣ ಇಲ್ಲದ ಖಾತೆಯ ಮೂಲಕ ಖರೀದಿಗಾಗಿ ಹಣ ನೀಡುವ ಪ್ರಯತ್ನ ನಡೆಸುತ್ತಿದ್ದ. ಆಗ ಹಣ ಪಾವತಿಯಾಗಿಲ್ಲ ಎಂಬ ಮೆಸೇಜ್ ಬರುತ್ತಿತ್ತು.

ಇದಾದ ನಂತರ ಬೇರೊಂದು ಖಾತೆಗೆ 1 ರೂ. ಹಣ ಪಾವತಿಸುತ್ತಿದ್ದ. ಆಗ ಹಣ ಪಾವತಿ ಯಶಸ್ವಿಯಾಗಿದೆ ಎಂಬ ಮೆಸೇಜ್ ಬರುತ್ತಿತ್ತು. ನಂತರ ವ್ಯಕ್ತಿ ತಾನೇ ರೂಪಿಸಿದ್ದ ಆಪ್ ಮೂಲಕ ಎರಡೂ ಮೆಸೇಜ್‌ಗಳನ್ನು ಬೆರೆಸಿ, ಹೋಟೆಲ್ ಇಲ್ಲವೇ ಆಭರಣದ ಅಂಗಡಿಗಳಿಗೆ ಹಣ ಪಾವತಿಯಾಗಿದೆ ಎಂಬ ನಕಲಿ ಮೆಸೇಜ್ ರೂಪಿಸುತ್ತಿದ್ದ. ನಂತರ ಅದರ ಸ್ಕ್ರೀನ್ ಶಾಟ್ ಅನ್ನು ಅಂಗಡಿಯವರಿಗೆ ಕಳಿಸುತ್ತಿದ್ದ ಎಂದು ಪೊಲೀಸರು ಹೇಳಿದ್ದಾರೆ.

14 ಆಭರಣದ ಅಂಗಡಿಗಳು ಹಾಗೂ 32 ಹೋಟೆಲ್‌ಗಳಿಗೆ ಈ ರೀತಿ ಮೋಸ ಮಾಡಿರುವುದು ಕಂಡು ಬಂದಿದೆ. ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಕರ್ನಾಟಕ, ಛತ್ತೀಸ್‌ಘಡ, ದೆಹಲಿ ಹಾಗೂ ರಾಜಸ್ಥಾನಗಳಲ್ಲಿ ವ್ಯಕ್ತಿ ವಂಚನೆ ಮಾಡಿದ್ದಾನೆ.

ಈತ ಇದುವರೆಗೂ 25 ಲಕ್ಷ ರೂ. ವಂಚನೆ ಮಾಡಿರುವುದು ಪತ್ತೆಯಾಗಿದೆ. ಇನ್ನಷ್ಟು ಕಡೆ ವಂಚನೆ ಮಾಡಿರುವ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತಿದೆ.

## ಅಪಹರಿಸಿ 300 ಕೋಟಿ ಕ್ರಿಪ್ಟೋ ಕೇಳಿದ ಪೊಲೀಸ್

ಪುಣೆ, ಫೆ. 2 – ವ್ಯಕ್ತಿಯೋರ್ವನನ್ನು ಅಪಹರಿಸಿ 300 ಕೋಟಿ ರೂ. ಮೌಲ್ಯದ ಕ್ರಿಪ್ಟೋ ಕರೆನ್ಸಿ ವಸೂಲಿಗೆ ಯತ್ನ ನಡೆಸಿದ ಓರ್ವ ಪೊಲೀಸ್ ಸೇರಿದಂತೆ ಎಂಟು ಜನರನ್ನು ಬಂಧಿಸಲಾಗಿದೆ.

ಪುಣೆಯ ಸೈಬರ್ ಕ್ರೈಂ ದಳದಲ್ಲಿ ಪೇದೆ ದಿಲೀಪ್ ತುಕಾರಾಮ್ ಖಂಡಾರೆ ಈ ಕೃತ್ಯ ಎಸಗಿರುವುದಾಗಿ ಆರೋಪಿಸಲಾಗಿದೆ. ಷೇರು ವ್ಯಾಪಾರಿ ವಿನಯ್ ನಾಯಕ್ ಅಪಹರಿಸಿ ಅವರಿಂದ 300 ಕೋಟಿ ರೂ. ಮೌಲ್ಯದ ಕ್ರಿಪ್ಟೋ ಕರೆನ್ಸಿ ನೀಡುವ ಬೇಡಿಕೆ ಇಡಲಾಗಿತ್ತು ಜನವರಿ 14ರಂದು ನಾಯಕ್‌ರನ್ನು ಅಪಹರಿಸಲಾಗಿತ್ತು. ಈ ಬಗ್ಗೆ ಅವರ ಸ್ನೇಹಿತರು ಎಫ್.ಐ.ಆರ್. ದಾಖಲಿಸಿದ್ದರು.

## ಶ್ರೀ ಕೊಟ್ಟೂರೇಶ್ವರ ದೇವಸ್ಥಾನದಲ್ಲಿ ಹುಂಡಿ ಹಣ ಎಣಿಕೆ



ಕೊಟ್ಟೂರು, ಫೆ. 2- ಇಲ್ಲಿನ ಶ್ರೀ ಕೊಟ್ಟೂರೇಶ್ವರ ಸ್ವಾಮಿ ಹುಂಡಿ ಎಣಿಕೆ ಸೋಮವಾರ ಸಂಜೆ ಮುಕ್ತಾಯಗೊಂಡಿದ್ದು, ಹುಂಡಿಯಲ್ಲಿ 52,33,338 ರೂ. ಸಂಗ್ರಹವಾಗಿದೆ. ಮುಜರಾಯಿ ಇಲಾಖೆ ಸಹಾಯಕ ಆಯುಕ್ತ ಪ್ರಕಾಶ್ ರಾವ್, ನಾಗರಾಜ್, ಪ್ರಕಾಶ್, ನಾಗರಾಜ ಗೌಡ, ರಾಜು ಹಾಗೂ ಪ್ರಗತಿ ಗ್ರಾಮೀಣ ಬ್ಯಾಂಕ್ ಸಿಬ್ಬಂದಿ ಉಪಸ್ಥಿತರಿದ್ದರು.

## ಆಶ್ರಯ ಮನೆ ಮಂಜೂರು ಮಾಡಿಸುವುದಾಗಿ ಹೇಳಿ ಹಣ ವಸೂಲಿ

ದಾವಣಗೆರೆ, ಫೆ.2- ನಗರ ವ್ಯಾಪ್ತಿಯಲ್ಲಿ ಆಶ್ರಯ ಯೋಜನೆಯಡಿಯಲ್ಲಿ ನಿವೇಶನ, ಮನೆ ಮಂಜೂರಾತಿ ಮಾಡಿಕೊಡಲಾಗುವುದು ಎಂದು ಕೆಲವು ಬೇನಾಮಿ ವ್ಯಕ್ತಿಗಳು ಅಧಿಕಾರಿಗಳ ಹೆಸರು ಹೇಳಿ ಹಣ ವಸೂಲಿ ಮಾಡುತ್ತಿ ದ್ದಾರೆಂದು ಸಾರ್ವಜನಿಕರಿಂದ ಕೇಳಿಬಂದಿದೆ.

ಸಾರ್ವಜನಿಕರು ಈ ತರಹದ ವದಂತಿಗಳಿಗೆ ಕಿವಿ ಕೊಡಬಾರದು, ಮೋಸ ಹೋಗಬಾರದೆಂದು ಶಾಸಕರೂ ಆದ ನಗರ ಆಶ್ರಯ ಸಮಿತಿ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ, ಆಯುಕ್ತ ವಿಶ್ವನಾಥ ಪಿ. ಮುದಜ್ಜಿ ಎಚ್ಚರಿಕೆ ನೀಡಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್ ಮತ್ತು 'ಸಿ' ಬ್ಲಾಕ್, ಎಸ್‌ಪಿ ಆಫೀಸ್, ಆರ್‌ಟಿಓ ಆಫೀಸ್, ವಿಜಯನಗರ ಬಡಾವಣೆ, ರಾಜೀವ್ ಗಾಂಧಿ ಬಡಾವಣೆ, ಎಸ್‌ಪಿಎಸ್ ನಗರ 2ನೇ ಹಂತ, ಎಸ್. ಎಮ್.ಕೆ ನಗರ, ವಾಲ್ಮೀಕಿ ಸರ್ಕಲ್ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಎಮ್‌ಬಿ ಕೇರಿ, ಹೊಂಡದ ಸರ್ಕಲ್ ಸುತ್ತಮುತ್ತ, ಕಾಯಿಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೇಪೇಟೆ, ಬಾರ್‌ಲೈನ್ ರಸ್ತೆ, ಹಾಗೂ ಇತರೆ ಪ್ರದೇಶಗಳು.

ಕೊಂಡಜ್ಜಿ ರಸ್ತೆ, ಎಸ್‌ಜೆಎಮ್ ನಗರ, ಸೇವಾದಳ ಕಾಲೋನಿ, ಹೊಸ ಕ್ಯಾಂಪ್, ಎಸ್‌ಎಮ್‌ಕೆ ನಗರ 2ನೇ ಹಂತ, ವೀರಾಂಜನೇಯ ಪೆಟ್ರೋಲ್ ಬಂಕ್ ಹತ್ತಿರ, ಬಿ.ಜೆ.ಎಮ್. ಸ್ಕೂಲ್, ಆರ್‌ಟಿಓ, ಆಫೀಸ್, ಬೂದಿಹಾಳ್ ರಸ್ತೆ. ಬಾಬು ಜಗಜೀವನ್‌ರಾಮ್ ನಗರ, ಗೌರಸಂದ್ರ ಮಾರಮ್ಮ ದೇವಸ್ಥಾನದ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ತರಳಬಾಳು ಬಡಾವಣೆ, ಕಾಫಿ ಡೇ, ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ಹಾಗು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಹುತಾತ್ಮ ದಿನ : ಸ್ಕೌಟ್ಸ್, ಗೈಡ್ಸ್ ಮಕ್ಕಳಿಂದ ಸರ್ವಧರ್ಮ ಪ್ರಾರ್ಥನೆ



ದಾವಣಗೆರೆ, ಫೆ. 2- ಬರೀ ದೇಶಕ್ಕೆ ಅಷ್ಟೇ ಅಲ್ಲದೇ ಇಡೀ ವಿಶ್ವಕ್ಕೇ ರಾಷ್ಟ್ರಪಿತ ಎನಿಸಿಕೊಂಡವರು ಮಹಾತ್ಮಾ ಗಾಂಧೀಜಿ ಎಂದು ಸ್ಕೌಟ್ ಮಾಸ್ಟರ್ ಟಿ.ಎಂ. ರವೀಂದ್ರಸ್ವಾಮಿ ತಿಳಿಸಿದರು.

ವಿದ್ಯಾನಗರ ಮೊದಲ ಬಸ್ ಸ್ಟಾಪ್ ಬಳಿ ಇರುವ ಮಹಾತ್ಮಾ ಗಾಂಧಿ ಪ್ರತಿಮೆ ಬಳಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕದ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯಿಂದ ಭಾನುವಾರ ಗಾಂಧಿ ಹುತಾತ್ಮರಾದ ದಿನದ ಅಂಗವಾಗಿ ಸರ್ವಧರ್ಮ ಪ್ರಾರ್ಥನೆ, ಗಾಂಧೀಜಿ ಪ್ರತಿಮೆಗೆ ಪುಷ್ಪಾರ್ಚನೆ ಹಾಗೂ ಮೇಣದ ಬತ್ತಿ ಬೆಳಗುವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಈ ದಿನವನ್ನು ಸರ್ವೋದಯ ದಿನವನ್ನಾಗಿ ಕೂಡ ಆಚರಿಸಲಾಗುತ್ತಿದೆ. ಮಹಾತ್ಮಾ ಗಾಂಧೀಜಿ ದೇಶಕ್ಕೆ ಒಂದು ವರ ಇದ್ದಂತೆ, ತಮ್ಮ ಶಾಂತಿಯ ಹೋರಾಟದಿಂದ ದೇಶಕ್ಕೆ ಸ್ವಾತಂತ್ರ್ಯ ತರಲು ಹೋರಾಟ ನಡೆಸಿ ಹುತಾತ್ಮರಾದರು. ಅವರೊಂದಿಗೆ ಅನೇಕ ದಾರ್ಶನಿಕರು ನಮಗೆ ಬ್ರಿಟೀಷರಿಂದ ಸ್ವಾತಂತ್ರ್ಯ ಪಡೆದುಕೊಳ್ಳುವ ಸಲುವಾಗಿ ಅನೇಕ ಹೋರಾಟಗಳನ್ನು ಮಾಡಿ ತಮ್ಮ ಜೀವವನ್ನು ತ್ಯಾಗ ಮಾಡಿದ್ದಾರೆ. ಅಂತಹ ಮಹಾನ್ ಪುರುಷರ ಆದರ್ಶಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಸ್ಕೌಟ್ ಶಿಕ್ಷಕರಾದ ವಿಜಯಕುಮಾರ, ಕೆ.ವಿ. ಸಿದ್ದೇಶ, ಶಶಿಕುಮಾರ, ಹಾಗೂ ತರಳಬಾಳು ವಸತಿ ಶಾಲೆ, ಮಾಗನೂರು ಬಸಪ್ಪ ಶಾಲೆ, ಅನ್‌ಮೋಲ್ ಪಬ್ಲಿಕ್ ಶಾಲೆ, ಬಾಪೂಜಿ ಓಪನ್ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು, ಮದರ್ ಥೆರೆಸಾ ಓಪನ್ ಗೈಡ್ ಕಂಪನಿ ಮಕ್ಕಳು ಭಾಗವಹಿಸಿ ಗಾಂಧೀಜಿಯವರನ್ನು ಸ್ಮರಿಸಿದರು.

## ಸಿರಿಗನ್ನಡಂ ಸಂಸ್ಥೆಯಿಂದ ಪ್ರತಿವಾರ ಅನ್ನದಾನ

ದಾವಣಗೆರೆ, ಫೆ. 2 - ಸಿರಿಗನ್ನಡಂ ವಿಕಲಚೇತನರ ಸೇವಾ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಪ್ರತಿ ಶುಕ್ರವಾರ ಮಧ್ಯಾಹ್ನ 12.30ಕ್ಕೆ ನಗರದ ಜಿಲ್ಲಾ ಕ್ರೀಡಾಂಗಣದ ಬಳಿ ಅನ್ನ ದಾಸೋಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ಟ್ರಸ್ಟ್‌ನ ರಾಜ್ಯಾಧ್ಯಕ್ಷ ಟಿ. ವೆಂಕಟೇಶ ಕಣ್ಣಾಳರ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಈ ಹಿಂದೆ ಒಂದು ವರ್ಷ ಕಾಲ ಪ್ರತಿನಿತ್ಯ ಅನ್ನದಾನ ಮಾಡಲಾಗಿತ್ತು. ಮುಂದಿನ ದಿನಗಳಲ್ಲಿ ದಾನಿಗಳ ನೆರವಿನಿಂದ ಪ್ರತಿದಿನ ಅನ್ನದಾನ ಮಾಡುವ ಉದ್ದೇಶವಿದೆ. ದಾನಿಗಳು ಮೊಬೈಲ್ ನಂ. : 9743549213 ಹಾಗೂ 9448924641 ಸಂಪರ್ಕಿಸಬಹುದು ಎಂದು ಹೇಳಿದ್ದಾರೆ.

ಸರ್ಕಾರಿ ಆಸ್ಪತ್ರೆಗೆ ಬರುವ ಬಡ ರೋಗಿಗಳು ಹಾಗೂ ರೋಗಿಗಳ ಜೊತೆ ಬರುವವರಿಗೆ ಅನ್ನದಾನ ಮಾಡುವುದು ಸಂಸ್ಥೆಯ ಉದ್ದೇಶವಾಗಿದೆ ಎಂದವರು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಟ್ರಸ್ಟ್‌ನ ನಾಗೇಂದ್ರ, ಬಂಡೀಕರ್, ಬಿ. ಎಸ್. ಮುದ್ದಯ್ಯ, ಎನ್. ಕಲ್ಲೇಶ್, ಎಸ್. ಹೊನ್ನಮ್ಮ, ರಾಜೇಶ್ವರಿ, ಜೆ. ಮಂಜುನಾಥ್, ಬಸವರಾಜ ಉಪಸ್ಥಿತರಿದ್ದರು.


**ಹನ್ನೊಂದನೇ ವರ್ಷದ ಚಿರಸ್ಮರಣೆ**



**ದಿ. ಶ್ರೀ ಬಿ.ಕೆ. ಸಂತೋಷ್**

ಜನನ: 15-12-1977
ನಿಧನ: 03-02-2011

ನೀವು ನಮ್ಮನ್ನಗಲಿ ಇಂದಿಗೆ ಹನ್ನೊಂದು ವರ್ಷಗಳು ಕಳೆದವು. ಸದಾ ನಿಮ್ಮ ಸ್ಮರಣೆಯಲ್ಲಿರುವ:

ಅಕ್ಕ: ಶ್ರೀಮತಿ ಬಿ.ಕೆ. ಅರ್ಚನಾ
ಭಾವ : ಶ್ರೀ ಡಿ. ಮಹಾವೀರ್
ಪ್ರೀತಿಯ ಸೊಸೆ : ಕು।। ಎಂ. ಲಕ್ಷ್ಮಿ

ಪದ್ಮಾಂಬ ಕಾಂಪ್ಲೆಕ್ಸ್, ದಾವಣಗೆರೆ.
**ಬೇತೂರು ಕುಟುಂಬ ವರ್ಗದವರು**
ಶ್ರೀ ಮಹಾವೀರ ಆಟೋಮೊಬೈಲ್ಸ್, ರಾಣೇಬೆನ್ನೂರು.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte